ಸೂ. 111 — 12. ಯೂಸುಫ್ — ರು. 12

اٰيَاتُهَا ١١١ — سُوْرَةُ يُوْسُفَ مَكِّيَّةٌ — رُكُوْعَاتُهَا ١٢

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಅಲಿಫ್ ಲಾಮ್ ರಾ. ಇವು ತನ್ನ ಅಭಿಪ್ರಾಯವನ್ನು ಸುವ್ಯಕ್ತವಾಗಿ ವಿವರಿಸಿ ಹೇಳುವ ಗ್ರಂಥದ ಸೂಕ್ತಗಳು.

الٓرٰ قف تِلْكَ اٰيٰتُ الْكِتٰبِ الْمُبِيْنِ ۟ قف ①

2. ಇದನ್ನು ಚೆನ್ನಾಗಿ ತಿಳಿದುಕೊಳ್ಳಲು ಸಾಧ್ಯವಾಗುವಂತೆ ನಾವು ಇದನ್ನು ಕುರ್‌ಆನನ್ನಾಗಿ[1] ಮಾಡಿ ಅರಬೀ ಭಾಷೆಯಲ್ಲಿ ಅವತೀರ್ಣಗೊಳಿಸಿದೆವು.

اِنَّآ اَنْزَلْنٰهُ قُرْءٰنًا عَرَبِيًّا لَّعَلَّكُمْ تَعْقِلُوْنَ ②

3. ಓ ಪೈಗಂಬರರೇ, ನಾವು ಈ ಕುರ್‌ಆನನ್ನು ನಿಮ್ಮ ಕಡೆಗೆ 'ದಿವ್ಯ ವಾಣಿ' ಮಾಡಿ, ವೃತ್ತಾಂತಗಳನ್ನೂ ವಸ್ತುಸ್ಥಿತಿಗಳನ್ನೂ ಉತ್ತಮ ಶೈಲಿಯಲ್ಲಿ ನಿಮಗೆ ವಿವರಿಸಿಕೊಡುತ್ತೇವೆ. ಅನ್ಯಥಾ ಇದಕ್ಕಿಂತ ಮುಂಚೆ ನೀವು (ಈ ವಿಷಯಗಳ ಕುರಿತು) ಸಂಪೂರ್ಣ ಪ್ರಜ್ಞಾಹೀನರಾಗಿದ್ದಿರಿ.

نَحْنُ نَقُصُّ عَلَيْكَ اَحْسَنَ الْقَصَصِ بِمَآ
اَوْحَيْنَآ اِلَيْكَ هٰذَا الْقُرْاٰنَ ۖ وَاِنْ كُنْتَ
مِنْ قَبْلِهٖ لَمِنَ الْغٰفِلِيْنَ ③

4. ಯೂಸುಫರು ತಮ್ಮ ಪಿತರೊಡನೆ ಹೇಳಿದ ಸಂದರ್ಭವಿದು- "ಅಪ್ಪಾ, ಹನ್ನೊಂದು ನಕ್ಷತ್ರಗಳೂ ಸೂರ್ಯನೂ ಚಂದ್ರನೂ ಇದ್ದು ಅವೆಲ್ಲಾ ನನಗೆ ಸಾಷ್ಟಾಂಗವೆರಗುತ್ತಿರುವುದನ್ನು ನಾನು ಸ್ವಪ್ನದಲ್ಲಿ ಕಂಡಿರುತ್ತೇನೆ."

اِذْ قَالَ يُوْسُفُ لِاَبِيْهِ يٰٓاَبَتِ اِنِّيْ رَاَيْتُ
اَحَدَ عَشَرَ كَوْكَبًا وَّالشَّمْسَ وَالْقَمَرَ
رَاَيْتُهُمْ لِيْ سٰجِدِيْنَ ④

5. ಉತ್ತರವಾಗಿ ಅವರ ತಂದೆ ಇಂತೆಂದರು, "ಮಗನೇ, ನಿನ್ನ ಈ ಸ್ವಪ್ನವನ್ನು ನಿನ್ನ ಸಹೋದರರೊಡನೆ ಹೇಳಬೇಡ. ಅನ್ಯಥಾ

قَالَ يٰبُنَيَّ لَا تَقْصُصْ رُءْيَاكَ عَلٰٓى
اِخْوَتِكَ فَيَكِيْدُوْا لَكَ كَيْدًا ۭ اِنَّ

1. ಕುರ್‌ಆನಿನ ಶಬ್ದಾರ್ಥ ಓದುವುದು ಎಂದಾಗಿದೆ. ಗ್ರಂಥಕ್ಕೆ ಈ ಹೆಸರನ್ನು ಏಕೆ ಕೊಡಲಾಗಿದೆ ಎಂದರೆ ಇದು ಎಲ್ಲಾ ವಿಭಾಗದ ಜನರು ಓದುವ ಮತ್ತು ಅತಿ ಹೆಚ್ಚಾಗಿ ಓದಲ್ಪಡುವ ಗ್ರಂಥವಾಗಿದೆ.

ಅವರು ನಿನ್ನ ವಿರುದ್ಧ ಒಳಸಂಚು ನಡೆಸುವರು.[2] ವಾಸ್ತವದಲ್ಲಿ ಶೈತಾನನು ಮಾನವನ ಪ್ರತ್ಯಕ್ಷ ಶತ್ರು.

الشَّيْطٰنَ لِلْاِنْسَانِ عَدُوٌّ مُّبِيْنٌ ⑤

6. (ನೀನು ಸ್ವಪ್ನದಲ್ಲಿ ಕಂಡ) ಹಾಗೆಯೇ ಆಗುವುದು. ನಿನ್ನ ಪ್ರಭುವು ನಿನ್ನನ್ನು (ತನ್ನ ಕಾರ್ಯಕ್ಕಾಗಿ) ಆಯ್ದುಕೊಳ್ಳುವನು. ನಿನಗೆ ವಿಷಯಗಳ ಆಳಕ್ಕೆ ತಲುಪುವುದನ್ನು ಕಲಿಸಿಕೊಡುವನು[3] ಮತ್ತು ಇದಕ್ಕೆ ಮುಂಚೆ, ನಿನ್ನ ಪೂರ್ವಜರಾಗಿದ್ದ ಇಬ್‌ರಾಹೀಮ್ ಮತ್ತು ಇಸ್‌ಹಾಕ್‌ರ ಮೇಲೆ ಅವನು ತನ್ನ 'ಭವ್ಯಕೊಡುಗೆ'ಯನ್ನು ಪೂರ್ಣಗೊಳಿಸಿದಂತೆ ನಿನ್ನ ಮೇಲೂ ಯಅ್‌ಕೂಬರ ವಂಶಜರ ಮೇಲೂ ಪೂರ್ಣಗೊಳಿಸುವನು. ನಿಶ್ಚಯವಾಗಿಯೂ ನಿನ್ನ ಪ್ರಭು ಸರ್ವಜ್ಞನೂ ಧೀಮಂತನೂ ಆಗಿರುತ್ತಾನೆ."

وَكَذٰلِكَ يَجْتَبِيْكَ رَبُّكَ وَيُعَلِّمُكَ مِنْ تَاْوِيْلِ الْاَحَادِيْثِ وَيُتِمُّ نِعْمَتَهٗ عَلَيْكَ وَعَلٰٓى اٰلِ يَعْقُوْبَ كَمَآ اَتَمَّهَا عَلٰٓى اَبَوَيْكَ مِنْ قَبْلُ اِبْرٰهِيْمَ وَاِسْحٰقَ ۭ اِنَّ رَبَّكَ عَلِيْمٌ حَكِيْمٌ ⑥

7. ವಾಸ್ತವದಲ್ಲಿ ಯೂಸುಫ್ ಮತ್ತು ಅವರ ಸಹೋದರರ ಚರಿತ್ರೆಯಲ್ಲಿ ಈ ಪ್ರಶ್ನಿಸುವವರಿಗೆ ದೊಡ್ಡ ನಿದರ್ಶನಗಳಿವೆ.

لَقَدْ كَانَ فِيْ يُوْسُفَ وَاِخْوَتِهٖٓ اٰيٰتٌ لِّلسَّاۗىِٕلِيْنَ ⑦

8. ಈ ಕಥೆಯ ಆರಂಭ ಹೀಗಿದೆ- ಅವರ ಸಹೋದರರು ಪರಸ್ಪರ ಹೀಗೆ ಹೇಳಿದರು: ಈ ಯೂಸುಫನೂ ಅವನ ಸಹೋದರನೂ[4] ನಮ್ಮ ತಂದೆಗೆ ನಮ್ಮೆಲ್ಲರಿಗಿಂತ ಹೆಚ್ಚು ಪ್ರಿಯರಾಗಿರುತ್ತಾರೆ. ವಸ್ತುತಃ ನಾವು ಒಂದು ಸಂಪೂರ್ಣ ಕೂಟವಾಗಿದ್ದೇವೆ. ನಿಜ ಹೇಳುವುದಾದರೆ ನಮ್ಮ ಪಿತೃವರ್ಯರು ಸ್ಪಷ್ಟ ದುರ್ಮಾರ್ಗದಲ್ಲಿದ್ದಾರೆ.

اِذْ قَالُوْا لَيُوْسُفُ وَاَخُوْهُ اَحَبُّ اِلٰٓى اَبِيْنَا مِنَّا وَنَحْنُ عُصْبَةٌ ۭ اِنَّ اَبَانَا لَفِيْ ضَلٰلٍ مُّبِيْنِۚ ⑧

9. ನಿಮ್ಮ ತಂದೆಯವರ ಒಲವು ನಿಮ್ಮ ಕಡೆಗೇ ಆಗುವಂತೆ ಮಾಡಲಿಕ್ಕಾಗಿ ಯೂಸುಫನನ್ನು ಕೊಂದು ಹಾಕಿರಿ, ಇಲ್ಲವೆ

اقْتُلُوْا يُوْسُفَ اَوِ اطْرَحُوْهُ اَرْضًا يَّخْلُ لَكُمْ وَجْهُ اَبِيْكُمْ وَتَكُوْنُوْا مِنْۢ بَعْدِهٖ

2. ಹ. ಯೂಸುಫ್‌ರ(ಅ) ಹತ್ತು ಮಂದಿ ಸಹೋದರರು ಬೇರೆ ತಾಯಿಯ ಉದರದಲ್ಲಿ ಹುಟ್ಟಿದವರಾಗಿದ್ದರು. ಅದರ ಜತೆಗೆ ಓರ್ವ ಕಿರಿಯ ಒಡಹುಟ್ಟಿದ ಸಹೋದರ ಅವರಿಗಿದ್ದನು. ಯೂಸುಫ್‌ರ(ಅ) ಮಲ ಸಹೋದರರು ಅವರ ಬಗ್ಗೆ ಅಸೂಯೆಪಡುತ್ತಿದ್ದರು. ತಮ್ಮ ಸ್ವಾರ್ಥ ಸಾಧನೆಗಾಗಿ ಯಾವುದೇ ಕೆಟ್ಟ ಕೆಲಸ ಮಾಡಲು ಹಿಂಜರಿಯುವರು ಎಂದು ಭಾವಿಸ ಬಹುದಾದಷ್ಟು ಉನ್ನತ ಚಾರಿತ್ರ್ಯವನ್ನೂ ಅವರು ಹೊಂದಿರಲಿಲ್ಲ ಎಂಬುದು ಹ. ಯಅ್‌ಕೂಬ್‌ರಿಗೆ(ಅ) ತಿಳಿದಿತ್ತು. ಆದ್ದರಿಂದ ಅವರು ತಮ್ಮ ಸಚ್ಚರಿತ ಪುತ್ರನನ್ನು ಜಾಗ್ರತೆಯಿಂದಿರುವಂತೆ ಎಚ್ಚರಿಸಿದರು. ಕನಸಿನಲ್ಲಿ ಕಂಡ ಸೂರ್ಯನೆಂದರೆ ಹ.ಯಅ್‌ಕೂಬ್(ಅ), ಚಂದ್ರನೆಂದರೆ ಅವರ ಪತ್ನಿ (ಹ. ಯೂಸುಫ್‌ರ(ಅ) ಮಲತಾಯಿ) ಮತ್ತು ಹನ್ನೊಂದು ನಕ್ಷತ್ರಗಳೆಂದರೆ ಹನ್ನೊಂದು ಪುತ್ರರಾಗಿದ್ದರು ಎಂಬುದು ಸ್ಪಷ್ಟವಿದೆ.

3. ಮೂಲದಲ್ಲಿ 'ತಅ್‌ವೀಲುಲ್ ಅಹಾದೀಸ್' ಎಂಬ ಪದ ಪ್ರಯೋಗವಾಗಿದೆ. ಅದರ ಅರ್ಥ ಸಾಮಾನ್ಯವಾಗಿ ಭಾವಿಸಲಾಗಿರುವಂತೆ ಕೇವಲ ಸ್ವಪ್ನಫಲದ ಜ್ಞಾನವಲ್ಲ. ವಾಸ್ತವದಲ್ಲಿ ಅದರ ತಾತ್ಪರ್ಯವೇನೆಂದರೆ ಅಲ್ಲಾಹನು ನಿನಗೆ ವ್ಯವಹಾರಜ್ಞಾನ ಮತ್ತು ವಾಸ್ತವಿಕತೆಯನ್ನು ಗುರುತಿಸುವ ಜ್ಞಾನ ದಯಪಾಲಿಸುವನು. ಪ್ರತಿಯೊಂದು ವಿಷಯದ ಆಳಕ್ಕೆ ತಲಪುವ ಮತ್ತು ತಳ ಮುಟ್ಟಲು ಸಾಧ್ಯವಾಗುವಂತಹ ಅಂತರ್‌ದೃಷ್ಟಿಯನ್ನು ನಿನಗೆ ನೀಡಲಾಗುವುದು ಎಂದಾಗಿದೆ.

4. ಅರ್ಥಾತ್- ಹ. ಯೂಸುಫ್‌ರಿಗಿಂತ(ಅ) ಹಲವು ವರ್ಷ ಕಿರಿಯರಾದ ಅವರ ತಮ್ಮ ಬಿನ್ ಯಮೀನ್.

ಎಲ್ಲಾದರೂ ಎಸೆದುಬಿಡಿರಿ. ಈ ಕಾರ್ಯವನ್ನು ಮಾಡಿಯಾದ ಬಳಿಕ ಸಜ್ಜನರಾಗಿರಬೇಕು.

قَوْمًا صٰلِحِيْنَ ⑨

10. ಆಗ ಅವರಲ್ಲೊಬ್ಬನು ಹೇಳಿದನು-"ಯೂಸುಫನನ್ನು ಕೊಲ್ಲಬೇಡಿರಿ. ಹಾಗೇನಾದರೂ ಮಾಡಲೇಬೇಕೆಂದಾದರೆ ಯಾವುದಾದರೊಂದು ಆಳವಾದ ಬಾವಿಯಲ್ಲಿ ಹಾಕಿಬಿಡಿರಿ. ಯಾವುದಾದರೊಂದು ಪ್ರವಾಸಿ ತಂಡವು ಅವನನ್ನು ಎತ್ತಿಕೊಂಡೊಯ್ಯಬಹುದು."

قَالَ قَآئِلٌ مِّنْهُمْ لَا تَقْتُلُوْا يُوْسُفَ
وَاَلْقُوْهُ فِيْ غَيٰبَتِ الْجُبِّ يَلْتَقِطْهُ بَعْضُ
السَّيَّارَةِ اِنْ كُنْتُمْ فٰعِلِيْنَ ⑩

11. ಈ ನಿರ್ಧಾರ ಪ್ರಕಾರ ಅವರು ಹೋಗಿ ತಮ್ಮ ತಂದೆಯವರೊಡನೆ, "ಅಪ್ಪಾ, ನೀವು ಯೂಸುಫನ ಬಗೆಗೆ ನಮ್ಮ ಮೇಲೆ ಭರವಸೆಯನ್ನೇಕೆ ಇರಿಸುವುದಿಲ್ಲ? ವಸ್ತುತಃ ನಾವು ಅವನ ನೈಜ ಹಿತಾಕಾಂಕ್ಷಿಗಳಾಗಿರುತ್ತೇವೆ.

قَالُوْا يٰۤاَبَانَا مَا لَكَ لَا تَاْمَنَّا عَلٰى يُوْسُفَ
وَاِنَّا لَهٗ لَنٰصِحُوْنَ ⑪

12. ನಾಳೆ ಅವನನ್ನು ನಮ್ಮ ಸಂಗಡ ಕಳುಹಿಸಿರಿ. ಏನಾದರೂ ಮೆದ್ದು,[5] ಆಡಿ, ನಲಿದು ಆನಂದ ಪಡುವನು. ನಾವು ಖಂಡಿತವಾಗಿಯೂ ಅವನ ರಕ್ಷಣೆಗೆ ಇದ್ದೇವೆ" ಎಂದರು.

اَرْسِلْهُ مَعَنَا غَدًا يَّرْتَعْ وَيَلْعَبْ وَاِنَّا
لَهٗ لَحٰفِظُوْنَ ⑫

13. ಆಗ ತಂದೆ ಹೇಳಿದರು, "ನೀವು ಅವನನ್ನು ಕರೆದೊಯ್ಯುವುದು ನನ್ನನ್ನು ದುಃಖಕ್ಕೀಡು ಮಾಡುತ್ತಿದೆ. ನೀವು ಅವನಿಂದ ಅಜಾಗರೂಕರಾಗಿದ್ದಾಗ ಅವನನ್ನು ತೋಳ ತಿಂದುಬಿಡಬಹುದೆಂಬ ಭಯ ನನ್ನನ್ನು ಕಾಡುತ್ತಿದೆ."

قَالَ اِنِّيْ لَيَحْزُنُنِيْۤ اَنْ تَذْهَبُوْا بِهٖ وَ
اَخَافُ اَنْ يَّاْكُلَهُ الذِّئْبُ وَاَنْتُمْ
عَنْهُ غٰفِلُوْنَ ⑬

14. ಆಗ ಅವರು, "ನಾವು ಒಂದು ತಂಡವೇ ಆಗಿರುವಾಗ, ನಾವಿರುತ್ತ ಅವನನ್ನು ತೋಳ ತಿಂದರೆ, ನಾವು ಯಾವುದಕ್ಕೂ ಬೇಡದವರಾಗುವೆವು" ಎಂದರು.

قَالُوْا لَئِنْ اَكَلَهُ الذِّئْبُ وَنَحْنُ
عُصْبَةٌ اِنَّاۤ اِذًا لَّخٰسِرُوْنَ ⑭

15. ಹೀಗೆ ಅವರು ಒತ್ತಾಯಪಡಿಸಿ ಅವರನ್ನು ಒಯ್ದಾಗ ಮತ್ತು ಅವರು ಅವರನ್ನು (ಯೂಸುಫರನ್ನು) ಒಂದು ಆಳವಾದ ಬಾವಿಗೆ ತಳ್ಳಿಬಿಡಬೇಕೆಂದು ಒಮ್ಮತದಿಂದ ನಿರ್ಧರಿಸಿದಾಗ, "ನೀನು ಇವರಿಗೆ ಇವರ ಈ ವರ್ತನೆಯ ಪರಿಣಾಮವನ್ನು ತೋರಿಸಿ ಕೊಡುವ ಸಂದರ್ಭವೊಂದು ಬರಲಿಕ್ಕಿದೆ. ಇವರು ಅದರ ಬಗ್ಗೆ ಪ್ರಜ್ಞಾಹೀನರಾಗಿದ್ದಾರೆ" ಎಂದು ನಾವು ಯೂಸುಫರಿಗೆ 'ದಿವ್ಯವಾಣಿ' ಮಾಡಿದೆವು.

فَلَمَّا ذَهَبُوْا بِهٖ وَاَجْمَعُوْۤا اَنْ يَّجْعَلُوْهُ
فِيْ غَيٰبَتِ الْجُبِّ ۚ وَاَوْحَيْنَاۤ اِلَيْهِ لَتُنَبِّئَنَّهُمْ
بِاَمْرِهِمْ هٰذَا وَهُمْ لَا يَشْعُرُوْنَ ⑮

5. ಮಗು ಕಾಡಿನಲ್ಲಿ ನಡೆದಾಡಿ ಹಣ್ಣುಗಳನ್ನು ಕೊಯ್ದು ತಿನ್ನುತ್ತಾ ಸುತ್ತಾಡುವುದನ್ನು ಅಕ್ಕರೆಯಿಂದ 'ಮೇಯುವುದು' ಎನ್ನಲಾಗಿದೆ.

16. ಸಂಜೆ ಹೊತ್ತಿಗೆ ಅವರು ಅಳುತ್ತ, ತಮ್ಮ ತಂದೆಯ ಬಳಿಗೆ ಬಂದರು.

وَجَآءُوۡۤ اَبَاهُمۡ عِشَآءً يَّبۡكُوۡنَ ؕ ١٦

17. "ಅಪ್ಪಾ, ನಾವು ಓಟದ ಸ್ಪರ್ಧೆಯಲ್ಲಿ ನಿರತರಾಗಿದ್ದೆವು. ಯೂಸುಫ ನನ್ನು ನಮ್ಮ ಸಾಮಾನುಗಳ ಹತ್ತಿರ ಬಿಟ್ಟಿದ್ದೆವು. ಅಷ್ಟರಲ್ಲಿ ತೋಳ ಬಂದು ಅವನನ್ನು ತಿಂದು ಬಿಟ್ಟಿತು. ನಾವು ಸತ್ಯ ವಂತರಾಗಿದ್ದರೂ ತಾವು ನಮ್ಮ ಮಾತನ್ನು ನಂಬಲಾರಿರಿ" ಎಂದರು.

قَالُوۡا يٰۤاَبَانَاۤ اِنَّا ذَهَبۡنَا نَسۡتَبِقُ وَتَرَكۡنَا
يُوۡسُفَ عِنۡدَ مَتَاعِنَا فَاَكَلَهُ الذِّئۡبُ ۚ
وَمَاۤ اَنۡتَ بِمُؤۡمِنٍ لَّنَا وَلَوۡ كُنَّا صٰدِقِيۡنَ ١٧

18. ಅವರು ಯೂಸುಫರ ಅಂಗಿಗೆ ಕೃತಕ ರಕ್ತ ಹಚ್ಚಿ ತಂದಿದ್ದರು. ಇದನ್ನು ಕೇಳಿ ಅವರ ತಂದೆ ಹೇಳಿದರು- "ಆದರೆ ನಿಮ್ಮ ಭ್ರಷ್ಟ ಚಿತ್ತಗಳು ನಿಮಗೆ ಒಂದು ದೊಡ್ಡ ಕಾರ್ಯವನ್ನು ಸುಲಭ ಗೊಳಿಸಿಬಿಟ್ಟವು. ಚಿಂತಿಲ್ಲ, ನಾನು ಸಹಿಸಿಕೊಳ್ಳುವೆನು- ಚೆನ್ನಾಗಿ ಸಹಿಸಿಕೊಳ್ಳುವೆನು. ನಿಮ್ಮ ಸೃಷ್ಟನೆಯ ಮಾತುಗಳ ಬಗ್ಗೆ ಅಲ್ಲಾಹ ನೊಡನೆ ಮಾತ್ರ ಸಹಾಯ ಯಾಚಿಸಬಹುದಷ್ಟೆ."

وَجَآءُوۡ عَلٰى قَمِيۡصِهٖ بِدَمٍ كَذِبٍ ؕ قَالَ
بَلۡ سَوَّلَتۡ لَـكُمۡ اَنۡفُسُكُمۡ اَمۡرًا ؕ فَصَبۡرٌ
جَمِيۡلٌ ؕ وَاللّٰهُ الۡمُسۡتَعَانُ عَلٰى مَا تَصِفُوۡنَ ١٨

19. ಅತ್ತ ಪ್ರವಾಸಿಗರ ತಂಡವೊಂದು ಬಂದಿತು. ಅದು ತನ್ನ ನೀರು ತರುವವನನ್ನು ನೀರು ತರಲು ಕಳುಹಿಸಿತು. ಅವನು ತೊಟ್ಟಿಯನ್ನು ಬಾವಿಗೆ ಇಳಿಸಿದಾಗ (ಯೂಸುಫರನ್ನು ಕಂಡು) "ಶುಭವಾಗಲಿ! ಇಲ್ಲೊಬ್ಬ ಬಾಲಕನಿದ್ದಾನೆ" ಎಂದು ಕೂಗಿದನು. ಅವರು (ಪ್ರವಾಸೀ ತಂಡದವರು) ಅವರನ್ನು (ಯೂಸುಫರನ್ನು) ವ್ಯಾಪಾರದ ಸರಕಾಗಿ ಬಚ್ಚಿಟ್ಟುಕೊಂಡರು. ವಸ್ತುತಃ ಅವರು ಮಾಡುತ್ತಿದ್ದು ದನ್ನು ಅಲ್ಲಾಹನು ಬಲ್ಲವನಾಗಿದ್ದನು.

وَجَآءَتۡ سَيَّارَةٌ فَاَرۡسَلُوۡا وَارِدَهُمۡ
فَاَدۡلٰى دَلۡوَهٗ ؕ قَالَ يٰبُشۡرٰى هٰذَا غُلٰمٌ ؕ
وَاَسَرُّوۡهُ بِضَاعَةً ؕ وَاللّٰهُ عَلِيۡمٌۢ
بِمَا يَعۡمَلُوۡنَ ١٩

20. ಕೊನೆಗೆ ಅವರು ಕೆಲವೇ ದಿರ್‌ಹಮ್‌ಗಳ ತುಚ್ಛ ಬೆಲೆಗೆ ಅವರನ್ನು ಮಾರಿಬಿಟ್ಟರು ಮತ್ತು ಅವರು ಅವರ ಬೆಲೆಯ ಬಗ್ಗೆ ಹೆಚ್ಚಿನ ನಿರೀಕ್ಷೆಯುಳ್ಳವರಾಗಿರಲಿಲ್ಲ.

وَشَرَوۡهُ بِثَمَنٍۢ بَخۡسٍ دَرَاهِمَ مَعۡدُوۡدَةٍ ۚ
وَكَانُوۡا فِيۡهِ مِنَ الزّٰهِدِيۡنَ ٢٠

21. ಅವರನ್ನು ಖರೀದಿಸಿದ ಈಜಿಪ್ಟಿನವನು ತನ್ನ ಪತ್ನಿಯೊಡನೆ, "ಇವನನ್ನು ಚೆನ್ನಾಗಿರಿಸು, ಇವನು ನಮಗೆ ಫಲಕಾರಿಯಾಗಲೂ ಬಹುದು ಅಥವಾ ನಾವು ಇವನನ್ನು ದತ್ತುಪುತ್ರನನ್ನಾಗಿಯೂ ಮಾಡಿಕೊಳ್ಳಬಹುದು! ಎಂದನು. ಈ ರೀತಿ ನಾವು ಯೂಸುಫರಿಗೆ ಆ ಭೂಭಾಗದಲ್ಲಿ ನೆಲೆಯೂರಲು ಅವಕಾಶ ಮಾಡಿ ಕೊಟ್ಟೆವು ಮತ್ತು ಅವರಿಗೆ ವಿಷಯಗಳನ್ನು ಗ್ರಹಿಸುವ ಜ್ಞಾನವನ್ನು ಕೊಡುವ

وَقَالَ الَّذِى اشۡتَرٰٮهُ مِنۡ مِّصۡرَ
لِامۡرَاَتِهٖۤ اَكۡرِمِىۡ مَثۡوٰٮهُ عَسٰٓى اَنۡ
يَّـنۡفَعَنَاۤ اَوۡ نَـتَّخِذَهٗ وَلَدًا ؕ وَكَذٰلِكَ مَكَّنَّا
لِيُوۡسُفَ فِى الۡاَرۡضِ وَلِنُعَلِّمَهٗ مِنۡ تَاۡوِيۡلِ
الۡاَحَادِيۡثِ ؕ وَاللّٰهُ غَالِبٌ عَلٰٓى اَمۡرِهٖ وَلٰـكِنَّ

ವ್ಯವಸ್ಥೆ ಮಾಡಿದೆವು. ಅಲ್ಲಾಹನು ತನ್ನ ಕಾರ್ಯವನ್ನು ಮಾಡಲು ಸುಶಕ್ತನು. ಆದರೆ ಹೆಚ್ಚಿನವರು ತಿಳಿಯುವುದಿಲ್ಲ.

أَكْثَرَ النَّاسِ لَا يَعْلَمُونَ ﴿٢١﴾

22. ಅವರು ತಮ್ಮ ತುಂಬು ಯೌವನಕ್ಕೆ ತಲುಪಿದಾಗ ನಾವು ಅವರಿಗೆ ತೀರ್ಮಾನದ ಶಕ್ತಿ ಮತ್ತು ಜ್ಞಾನ ನೀಡಿದೆವು. ಸಜ್ಜನರಿಗೆ ನಾವು ಈ ರೀತಿ ಪ್ರತಿಫಲ ನೀಡುತ್ತೇವೆ.

وَلَمَّا بَلَغَ أَشُدَّهُ آتَيْنَاهُ حُكْمًا وَعِلْمًا ۚ
وَكَذَٰلِكَ نَجْزِي الْمُحْسِنِينَ ﴿٢٢﴾

23. ಯೂಸುಫರು ವಾಸಿಸುತ್ತಿದ್ದ ಮನೆಯೊಡತಿ ಅವರ ಮೇಲೆ ಪ್ರೇಮ ಜಾಲ ಬೀಸತೊಡಗಿದಳು. ಒಂದು ದಿನ ಕದ ಮುಚ್ಚಿ, 'ಇತ್ತ ಬಾ' ಎಂದಳು. ಆಗ ಯೂಸುಫರು 'ಅಲ್ಲಾಹನು ರಕ್ಷಿಸಲಿ. ನನ್ನ ಪ್ರಭು[6] ನನಗೆ ಉತ್ತಮ ಸ್ಥಾನವನ್ನು ದಯಪಾಲಿಸಿದ್ದಾನೆ. (ಹೀಗಿರುವಾಗ ನಾನು ಈ ನೀಚ ಕಾರ್ಯವೆಸಗುವುದೇ?) ಇಂತಹ ಅಕ್ರಮಿಗಳು ಎಂದೂ ಯಶಸ್ವಿಗಳಾಗುವುದಿಲ್ಲ" ಎಂದರು.

وَرَاوَدَتْهُ الَّتِي هُوَ فِي بَيْتِهَا عَن نَّفْسِهِ
وَغَلَّقَتِ الْأَبْوَابَ وَقَالَتْ هَيْتَ لَكَ ۚ قَالَ
مَعَاذَ اللَّهِ ۖ إِنَّهُ رَبِّي أَحْسَنَ مَثْوَايَ ۖ إِنَّهُ
لَا يُفْلِحُ الظَّالِمُونَ ﴿٢٣﴾

24. ಅವಳು ಅವರ ಕಡೆಗೆ ಮುಂದುವರಿದಳು. ಯೂಸುಫರೂ ತಮ್ಮ ಪ್ರಭುವಿನ ನಿದರ್ಶನವನ್ನು ಕಾಣದಿರುತ್ತಿದ್ದರೆ[7] ಅವಳ ಕಡೆಗೆ ಮುಂದಾಗುತ್ತಿದ್ದರು. ಹೀಗಾದುದು ನಾವು ಅವರಿಂದ ಪಾಪ ಮತ್ತು ನಿರ್ಲಜ್ಜತನವನ್ನು ತೊಲಗಿಸಲಿಕ್ಕಾಗಿ, ವಾಸ್ತವದಲ್ಲಿ ಅವರು ನಮ್ಮ ಆಯ್ದ ದಾಸರಲ್ಲಾಗಿದ್ದರು.

وَلَقَدْ هَمَّتْ بِهِ ۖ وَهَمَّ بِهَا لَوْلَا أَن رَّأَىٰ
بُرْهَانَ رَبِّهِ ۚ كَذَٰلِكَ لِنَصْرِفَ عَنْهُ السُّوءَ
وَالْفَحْشَاءَ ۚ إِنَّهُ مِنْ عِبَادِنَا الْمُخْلَصِينَ ﴿٢٤﴾

25. ಕೊನೆಗೆ ಯೂಸುಫರು ಮುಂದಿನಿಂದಲೂ ಅವಳು ಹಿಂದಿನಿಂದಲೂ ಬಾಗಿಲಿನತ್ತ ಓಡಿದರು ಮತ್ತು ಹಿಂದಿನಿಂದ ಯೂಸುಫರ ಅಂಗಿಯನ್ನು (ಹಿಡಿದೆಳೆದು) ಹರಿದಳು. ಬಾಗಿಲಲ್ಲಿ ಅವರಿಬ್ಬರೂ ಅವಳ ಪತಿ ಉಪಸ್ಥಿತನಿದ್ದುದನ್ನು ಕಂಡರು. ಅವನನ್ನು ಕಂಡೊಡನೆ

وَاسْتَبَقَا الْبَابَ وَقَدَّتْ قَمِيصَهُ مِن
دُبُرٍ وَأَلْفَيَا سَيِّدَهَا لَدَى الْبَابِ ۚ قَالَتْ
مَا جَزَاءُ مَنْ أَرَادَ بِأَهْلِكَ سُوءًا إِلَّا

6. ಸಾಮಾನ್ಯವಾಗಿ ವ್ಯಾಖ್ಯಾನಕಾರರು ಮತ್ತು ಅನುವಾದಕರು ಇಲ್ಲಿ 'ನನ್ನ ಪ್ರಭು' ಎಂಬ ಪದವನ್ನು ಹ. ಯೂಸುಫ್(ಅ) ತಾನು ನೌಕರಿ ಮಾಡುತ್ತಿದ್ದ ಆ ವ್ಯಕ್ತಿಗೆ ಉಪಯೋಗಿಸಿದ್ದಾರೆ ಎಂದು ಭಾವಿಸುತ್ತಾರೆ. ನನ್ನ ಯಜಮಾನ ನನ್ನನ್ನು ಇಷ್ಟು ಸುಸ್ಥಿತಿಯಲ್ಲಿಟ್ಟಿದ್ದಾನೆ. ಹಾಗಿರುವಾಗ ಅವನ ಪತ್ನಿಯೊಡನೆ ವ್ಯಭಿಚಾರವೆಸಗುವಂತಹ, ಉಂಡ ಮನೆಗೆ ಎರಡು ಬಗೆಯುವ ಕೆಲಸವನ್ನು ನಾನು ಮಾಡುವುದಾದರೂ ಹೇಗೆ ಎಂಬುದು ಅವರ ಮಾತಿನ ಇಂಗಿತವಾಗಿತ್ತೆಂದು ಭಾವಿಸಲಾಗುತ್ತದೆ. ಆದರೆ ಪಾಪದಿಂದ ದೂರವಿರಲಿಕ್ಕಾಗಿ ಅಲ್ಲಾಹನ ಬದಲು ಯಾವನಾದರೊಬ್ಬ ದಾಸನನ್ನು ಭಯಪಡುವುದು ಓರ್ವ ಪ್ರವಾದಿಯ ಘನತೆಗೆ ತಕ್ಕುದಾದ ಮಾತಲ್ಲ. ಅಲ್ಲದೆ ದೇವೇತರರನ್ನು 'ರಬ್ಬ್' ಎಂದು ಅಲ್ಲಾಹನ ಯಾವುದೇ ಪ್ರವಾದಿ ಹೇಳಿರುವುದಕ್ಕೆ ಕುರ್‌ಆನಿನಲ್ಲಿ ಉದಾಹರಣೆಯಿಲ್ಲ.

7. 'ಬುರ್‌ಹಾನ್' ಎಂದರೆ ಸಾಕ್ಷ್ಯ ಮತ್ತು ನಿದರ್ಶನ. ಪ್ರಭುವಿನ ಬುರ್‌ಹಾನ್ ಎಂದರೆ ಅಲ್ಲಾಹನು ಬೋಧಿಸಿರುವ ನಿದರ್ಶನ. ಅದರ ಮೂಲಕವೇ ಯೂಸುಫ್‌ರ(ಅ) ಮನಸ್ಸಾಕ್ಷಿಗೆ ಈ ಮಹಿಳೆಯು ವಿಲಾಸಕ್ಕೆ ನೀಡಿರುವ ಆಹ್ವಾನವನ್ನು ಸ್ವೀಕರಿಸುವುದು ನಿನಗೆ ಭೂಷಣವಲ್ಲ ಎಂದು ಪ್ರೇರೇಪಿಸಲು ಸಾಧ್ಯವಾಯಿತು. ಹಾಗೆಯೇ ಹಿಂದಿನ ಉಲ್ಲೇಖದಲ್ಲಿ ಬಂದಿರುವ, "ನನ್ನ ಪ್ರಭು ನನಗೆ ಉತ್ತಮ ಸ್ಥಾನವನ್ನು ದಯಪಾಲಿಸಿದ್ದಾನೆ. (ಹೀಗಿರುವಾಗ ನಾನು ಈ ನೀಚ ಕಾರ್ಯವೆಸಗುವುದೇ?) ಇಂತಹ ಅಕ್ರಮಿಗಳು ಎಂದೂ ಯಶಸ್ವಿಗಳಾಗುವುದಿಲ್ಲ" ಎಂಬುದೂ ಅಲ್ಲಾಹನ ನಿದರ್ಶನವೇ ಆಗಿದೆ.

ಆಕೆ ಹೇಳಿದಳು, "ನಿಮ್ಮ ಮನೆಯಾಕೆಯೊಂದಿಗೆ ನೀಚಕಾರ್ಯ ವೆಸಗಲಿಚ್ಛಿಸಿದವನ ಶಿಕ್ಷೆಯೇನು? ಇವನಿಗೆ ಸೆರೆಮನೆವಾಸ ಅಥವಾ ವೇದನಾತ್ಮಕ ದಂಡನೆಯ ವಿನಾ ಇನ್ನಾವ ಶಿಕ್ಷೆ ಇರಬಹುದು?"

أَنْ يُّسْجَنَ أَوْ عَذَابٌ أَلِيْمٌ ﴿٢٥﴾

26. (ಆಗ) ಯೂಸುಫರು, "ಇವಳೇ ನನ್ನನ್ನು ಬಲೆಗೆ ಸಿಕ್ಕಿಸಲು ಯತ್ನಿಸಿದ್ದಳು" ಎಂದರು. ಆ ಸ್ತ್ರೀಯ ಕುಟುಂಬದವರಲ್ಲೊಬ್ಬನು (ಸಂದರ್ಭೋಚಿತ) ಸಾಕ್ಷ್ಯವನ್ನು ಹೀಗೆ ನೀಡಿದನು- "ಯೂಸುಫನ ಅಂಗಿ ಮುಂಭಾಗದಿಂದ ಹರಿದಿದ್ದರೆ ಸ್ತ್ರೀಯು ಸತ್ಯವಂತಳು ಮತ್ತು ಇವನು ಸುಳ್ಳುಗಾರ.

قَالَ هِيَ رَاوَدَتْنِيْ عَنْ نَّفْسِيْ وَ شَهِدَ شَاهِدٌ مِّنْ أَهْلِهَا ۚ إِنْ كَانَ قَمِيْصُهٗ قُدَّ مِنْ قُبُلٍ فَصَدَقَتْ وَهُوَ مِنَ الْكٰذِبِيْنَ ﴿٢٦﴾

27. ಇವನ ಅಂಗಿ ಹಿಂಭಾಗದಿಂದ ಹರಿದಿದ್ದರೆ ಸ್ತ್ರೀಯು ಸುಳ್ಳುಗಾರ್ತಿ ಮತ್ತು ಇವನು ಸತ್ಯವಂತ."[8]

وَإِنْ كَانَ قَمِيْصُهٗ قُدَّ مِنْ دُبُرٍ فَكَذَبَتْ وَهُوَ مِنَ الصّٰدِقِيْنَ ﴿٢٧﴾

28. ಆಕೆಯ ಪತಿಯು ಯೂಸುಫರ ಅಂಗಿಯು ಹಿಂಭಾಗದಿಂದ ಹರಿದಿದ್ದುದನ್ನು ಕಂಡಾಗ ಇಂತೆಂದನು, "ನಿಮ್ಮ (ಸ್ತ್ರೀಯರ) ಕುತಂತ್ರಗಳಿವು. ನಿಜಕ್ಕೂ ನಿಮ್ಮ ಕುತಂತ್ರಗಳು ಕಂಟಕಪ್ರಾಯ ವಾಗಿರುತ್ತವೆ.

فَلَمَّا رَاٰ قَمِيْصَهٗ قُدَّ مِنْ دُبُرٍ قَالَ إِنَّهٗ مِنْ كَيْدِكُنَّ ۭ إِنَّ كَيْدَكُنَّ عَظِيْمٌ ﴿٢٨﴾

29. ಯೂಸುಫ್! ನೀನು ಈ ವಿಷಯವನ್ನು ಕಡೆಗಣಿಸು ಮತ್ತು ಓ ಸ್ತ್ರೀಯೇ! ನೀನು ನಿನ್ನ ಅಪರಾಧಕ್ಕಾಗಿ ಕ್ಷಮೆ ಯಾಚಿಸು. ವಾಸ್ತವದಲ್ಲಿ ನೀನೇ ಅಪರಾಧಿಯಾಗಿದ್ದಿ."

يُوْسُفُ أَعْرِضْ عَنْ هٰذَا ٚ وَاسْتَغْفِرِيْ لِذَنْۢبِكِ ۚ إِنَّكِ كُنْتِ مِنَ الْخٰطِـِٕيْنَ ﴿٢٩﴾ ع ٣ ١٣

30. ನಗರದ ವನಿತೆಯರು ಪರಸ್ಪರ ಚರ್ಚಿಸತೊಡಗಿದರು- "ಅಝೀಝುನ[9] ಪತ್ನಿ ತನ್ನ ತರುಣ ಗುಲಾಮನನ್ನು ಮೋಹಪಾಶ ದಲ್ಲಿ ಬಿಗಿಯಲು ಯತ್ನಿಸುತ್ತಿದ್ದಾಳೆ. ಪ್ರೇಮವು ಅವಳನ್ನು ಅನಿಯಂತ್ರಿತಗೊಳಿಸಿದೆ. ನಮ್ಮ ದೃಷ್ಟಿಯಲ್ಲಿ ಅವಳು ಸುವ್ಯಕ್ತ ತಪ್ಪು ಹಾದಿಯಲ್ಲಿದ್ದಾಳೆ."

وَقَالَ نِسْوَةٌ فِي الْمَدِيْنَةِ امْرَاَتُ الْعَزِيْزِ تُرَاوِدُ فَتٰىهَا عَنْ نَّفْسِهٖ ۚ قَدْ شَغَفَهَا حُبًّا ۭ إِنَّا لَنَرٰىهَا فِيْ ضَلٰلٍ مُّبِيْنٍ ﴿٣٠﴾

8. ಅರ್ಥಾತ್- ಹ. ಯೂಸುಫ್‌ರ(ಅ) ಅಂಗಿ ಮುಂಭಾಗದಿಂದ ಹರಿದಿದ್ದರೆ ಯೂಸುಫ್‌ರೇ(ಅ) ಮೊದಲು ಕೈ ಮಾಡಿದ್ದರು ಮತ್ತು ಮಹಿಳೆ ತನ್ನ ರಕ್ಷಣೆಗಾಗಿ ಸೆಣಸುತ್ತಿದ್ದಳು ಎಂಬುದಕ್ಕೆ ಅದೊಂದು ಸ್ಪಷ್ಟ ಪುರಾವೆಯಾಗಿದೆ. ಆದರೆ ಯೂಸುಫ್‌ರ(ಅ) ಅಂಗಿ ಹಿಂದಿನಿಂದ ಹರಿದಿದ್ದರೆ ಆಕೆ ಅವರ ಹಿಂದೆ ಬಿದ್ದಿದ್ದಳು ಮತ್ತು ಯೂಸುಫ್(ಅ) ಆಕೆಯಿಂದ ಬಿಡಿಸಿ ಕೊಳ್ಳಬಯಸಿದ್ದರು ಎಂದು ಸಾಬೀತಾಗುತ್ತದೆ. ಅಲ್ಲದೆ ಊಹೆಗೆ ನಿಲುಕುವಂತಹ ಇನ್ನೊಂದು ಸಾಕ್ಷ್ಯವೂ ಇದರಲ್ಲಿ ಅಡಕವಾಗಿದೆ. ಪ್ರಸ್ತುತ ಸಾಕ್ಷಿದಾರನು ಹ. ಯೂಸುಫ್‌ರ(ಅ) ಅಂಗಿಯ ಕಡೆಗೆ ಮಾತ್ರ ಗಮನ ಸೆಳೆದಿದ್ದಾನೆ. ಇದರಿಂದ ಆ ಸ್ತ್ರೀಯ ದೇಹದಲ್ಲಿ ಹೊಯ್ಕೈಯ ಯಾವುದೇ ಚಿಹ್ನೆಗಳು ಇರಲಿಲ್ಲವೆಂದು ವ್ಯಕ್ತವಾಗುತ್ತದೆ. ಇದೊಂದು ವೇಳೆ ಅತ್ಯಾಚಾರದ ಪ್ರಕರಣವಾಗಿದ್ದರೆ ಆಕೆಯಲ್ಲಿ ಅದರ ಲಕ್ಷಣಗಳು ಇರಬೇಕಾಗಿತ್ತು.

9. 'ಅಝೀಝ್' ಎಂಬುದು ಆ ವ್ಯಕ್ತಿಯ ಹೆಸರಾಗಿರಲಿಲ್ಲ. ಬದಲಾಗಿ ಈಜಿಪ್ಟ್‌ನಲ್ಲಿ ಉನ್ನತ ಪದವಿಯಲ್ಲಿರುವ ವ್ಯಕ್ತಿಗೆ ಈ ಪದವನ್ನು ಸಾಮಾನ್ಯವಾಗಿ ಪ್ರಯೋಗಿಸಲಾಗುತ್ತಿತ್ತು.

31. ಅವಳು ಅವರ ಈ ಕುಟಿಲ ಮಾತುಗಳನ್ನು ಕೇಳಿದಾಗ ಕರೆ ಕಳುಹಿಸಿದಳು ಮತ್ತು ಅವರಿಗಾಗಿ ಸುಪ್ಪತ್ತಿಗೆಗಳಿಂದ ಸಜ್ಜಾದ ಸಭೆಯೊಂದನ್ನು ಏರ್ಪಡಿಸಿದಳು. ಔತಣದಲ್ಲಿ ಪ್ರತಿಯೊಬ್ಬಳ ಮುಂದೆ ಒಂದೊಂದು ಚೂರಿಯನ್ನಿರಿಸಿದಳು. (ಆ ಸ್ತ್ರೀಯರು ಹಣ್ಣುಗಳನ್ನು ಕೊಯ್ದು ತಿನ್ನುತ್ತಲಿದ್ದ ಅದೇ ವೇಳೆಯಲ್ಲಿ) ಅವಳು ಯೂಸುಫರಿಗೆ ಅವರ ಮುಂದೆ ಹೊರಟು ಬರುವಂತೆ ಸೂಚನೆ ಕೊಟ್ಟಳು. ಆ ಸ್ತ್ರೀಯರ ದೃಷ್ಟಿ ಅವರ ಮೇಲೆ ಬಿದ್ದಾಗ ಅವರು ದಂಗಾದರು ಮತ್ತು ತಮ್ಮ ಕೈಗಳನ್ನೇ ಕೊಯ್ದುಕೊಂಡರು. "ಅಲ್ಲ, ಈತನು ಎಷ್ಟು ಮಾತ್ರಕ್ಕೂ ಮಾನವನಲ್ಲ. ಇದಾರೋ ಸನ್ಮಾನ್ಯ ದೇವಚರ" ಎಂದು ಭಾವಪರವಶರಾಗಿ ಕೂಗಿಕೊಂಡರು.

فَلَمَّا سَمِعَتْ بِمَكْرِهِنَّ أَرْسَلَتْ إِلَيْهِنَّ
وَأَعْتَدَتْ لَهُنَّ مُتَّكَأً وَآتَتْ كُلَّ
وَاحِدَةٍ مِنْهُنَّ سِكِّينًا وَقَالَتِ اخْرُجْ
عَلَيْهِنَّ ۚ فَلَمَّا رَأَيْنَهُ أَكْبَرْنَهُ وَقَطَّعْنَ
أَيْدِيَهُنَّ وَقُلْنَ حَاشَ لِلَّهِ مَا هَٰذَا
بَشَرًا ۖ إِنْ هَٰذَا إِلَّا مَلَكٌ كَرِيمٌ ﴿٣١﴾

32. ಅಝೀಝ್‌ನ ಪತ್ನಿ ಹೇಳಿದಳು, "ಕಂಡಿರಾ! ಯಾರ ವಿಷಯವಾಗಿ ನೀವು ನನ್ನ ಕುರಿತು ಆಕ್ಷೇಪಕರ ಮಾತುಗಳನ್ನಾಡುತ್ತಿದ್ದಿರೋ ಆ ವ್ಯಕ್ತಿ ಇವನೇ. ನಿಸ್ಸಂದೇಹವಾಗಿಯೂ ನಾನು ಇವನನ್ನು ವಶೀಕರಿಸಲು ಪ್ರಯತ್ನಿಸಿದ್ದೆ. ಆದರೆ ಇವನು ತಪ್ಪಿಸಿಕೊಂಡನು. ಇವನು ನನ್ನ ಮಾತು ಕೇಳದಿದ್ದರೆ, ಸೆರೆಮನೆ ಸೇರುವನು ಮತ್ತು ಅಪಮಾನಕ್ಕೊಳಗಾಗುವನು."

قَالَتْ فَذَٰلِكُنَّ الَّذِي لُمْتُنَّنِي فِيهِ ۖ
وَلَقَدْ رَاوَدْتُهُ عَنْ نَفْسِهِ فَاسْتَعْصَمَ ۖ
وَلَئِنْ لَمْ يَفْعَلْ مَا آمُرُهُ لَيُسْجَنَنَّ وَ
لَيَكُونًا مِنَ الصَّاغِرِينَ ﴿٣٢﴾

33. ಯೂಸುಫ್ ಹೇಳಿದರು, "ಓ ನನ್ನ ಪ್ರಭೂ, ಇವರು ನನ್ನಿಂದ ಬಯಸುವ ಕಾರ್ಯಕ್ಕಿಂತ ನನಗೆ ಸೆರೆಮನೆಯೇ ಲೇಸು. ನೀನು ಇವರ ಕುತಂತ್ರಗಳನ್ನು ನನ್ನಿಂದ ನೀಗಿಸದಿದ್ದರೆ ನಾನು ಅವರ ಬಲೆಯಲ್ಲಿ ಬಿದ್ದು ಹೋಗುವೆನು ಮತ್ತು ಅಜ್ಞಾನಿಗಳಲ್ಲಿ ಸೇರಿ ಹೋಗುವೆನು."

قَالَ رَبِّ السِّجْنُ أَحَبُّ إِلَيَّ مِمَّا يَدْعُونَنِي
إِلَيْهِ ۖ وَإِلَّا تَصْرِفْ عَنِّي كَيْدَهُنَّ أَصْبُ
إِلَيْهِنَّ وَأَكُنْ مِنَ الْجَاهِلِينَ ﴿٣٣﴾

34. ಅವರ ಪ್ರಭು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಆ ಸ್ತ್ರೀಯರ ಕುತಂತ್ರಗಳನ್ನು ಅವರಿಂದ ನೀಗಿಸಿದನು. ನಿಶ್ಚಯವಾಗಿಯೂ ಸರ್ವಶ್ರುತನೂ ಸರ್ವಜ್ಞನೂ ಅವನೇ.

فَاسْتَجَابَ لَهُ رَبُّهُ فَصَرَفَ عَنْهُ
كَيْدَهُنَّ ۚ إِنَّهُ هُوَ السَّمِيعُ الْعَلِيمُ ﴿٣٤﴾

35. ತರುವಾಯ ಒಂದು ಕಾಲಾವಧಿಯುವರೆಗೆ ಇವರನ್ನು ಸೆರೆಯಲ್ಲಿಡಬೇಕೆಂದು ಅವರಿಗೆ ತೋರಿತು. ವಸ್ತುತಃ ಅವರು (ಇವರ ಪಾವಿತ್ರ್ಯ ಮತ್ತು ಸ್ವತಃ ತಮ್ಮ ಸ್ತ್ರೀಯರ ದುರ್ಗುಣಗಳ) ಸುಸ್ಪಷ್ಟ ದೃಷ್ಟಾಂತಗಳನ್ನು ಕಂಡುಕೊಂಡಿದ್ದರು.[10]

ثُمَّ بَدَا لَهُمْ مِنْ بَعْدِ مَا رَأَوُا الْآيَاتِ
لَيَسْجُنُنَّهُ حَتَّىٰ حِينٍ ﴿٣٥﴾ ع

10. ನ್ಯಾಯದ ಬೇಡಿಕೆಯನುಸಾರ ಕೋರ್ಟಿನಲ್ಲಿ ಅಪರಾಧವನ್ನು ಸಾಬೀತು ಪಡಿಸದೆ ಅನ್ಯಾಯವಾಗಿ ಯಾರನ್ನಾದರೂ ಹಿಡಿದು ಸೆರೆಮನೆಗೆ ಕಳುಹಿಸುವುದು ಕೆಟ್ಟ ಆಡಳಿತಗಾರರಲ್ಲಿದ್ದ ಹಳೇ ಚಾಳಿ ಎಂದು ಇದರಿಂದ ವ್ಯಕ್ತವಾಗುತ್ತದೆ. ಇಂದಿನ ನರಪಿಶಾಚಿಗಳೂ ಈ ವಿಷಯದಲ್ಲಿ ನಾಲ್ಕು ಸಾವಿರ ವರ್ಷ ಪೂರ್ವದ ಕಿಡಿಗೇಡಿಗಳಿಗಿಂತ ಭಿನ್ನರಲ್ಲ.

36. ಸೆರೆಮನೆಯೊಳಗೆ ಇನ್ನಿಬ್ಬರು ಗುಲಾಮರೂ ಇವರೊಂದಿಗೆ ಪ್ರವೇಶಿಸಿದರು. ಒಂದು ದಿನ ಅವರಲ್ಲೊಬ್ಬನು "ನಾನು ಸಾರಾಯಿ ಭಟ್ಟಿ ಇಳಿಸುತ್ತಿರುವುದನ್ನು ಸ್ವಪ್ನದಲ್ಲಿ ಕಂಡೆನು" ಎಂದನು. ಇನ್ನೊಬ್ಬನು, "ನನ್ನ ತಲೆಯ ಮೇಲೆ ರೊಟ್ಟಿಯನ್ನಿರಿಸಿರುವುದನ್ನೂ ಪಕ್ಷಿಗಳು ಅವುಗಳನ್ನು ತಿನ್ನುತ್ತಿರುವುದನ್ನೂ ನಾನು ಕಂಡೆನು" ಎಂದನು. ನಮಗೆ ಇದರ ಮರ್ಮ ತಿಳಿಸಬೇಕೆಂದೂ ನೀವೊಬ್ಬ ಸಜ್ಜನರಾಗಿರುವುದನ್ನು ನಾವು ಕಾಣುತ್ತೇವೆಂದೂ ಇಬ್ಬರೂ ಹೇಳಿದರು.

وَدَخَلَ مَعَهُ السِّجْنَ فَتَيَانِ ۗ قَالَ اَحَدُهُمَآ اِنِّيْٓ اَرٰىنِيْٓ اَعْصِرُ خَمْرًا ۚ وَقَالَ الْاٰخَرُ اِنِّيْٓ اَرٰىنِيْٓ اَحْمِلُ فَوْقَ رَاْسِيْ خُبْزًا تَاْكُلُ الطَّيْرُ مِنْهُ ۗ نَبِّئْنَا بِتَاْوِيْلِهٖ ۚ اِنَّا نَرٰىكَ مِنَ الْمُحْسِنِيْنَ ﴿٣٦﴾

37. ಯೂಸುಫ್ (ಹೀಗೆ) ಹೇಳಿದರು- "ಇಲ್ಲಿ ನಿಮಗೆ ಸಿಗುತ್ತಿರುವ ಊಟ ಬರುವುದಕ್ಕೆ ಮುಂಚೆ ನಾನು ನಿಮಗೆ ಈ ಸ್ವಪ್ನಗಳ ಫಲವನ್ನು ಹೇಳುವೆನು. ಇದು ನನ್ನ ಪ್ರಭು ನನಗೆ ದಯಪಾಲಿಸಿರುವ ಜ್ಞಾನಗಳಲ್ಲೊಂದು. ವಾಸ್ತವದಲ್ಲಿ ನಾನು ಅಲ್ಲಾಹನ ಮೇಲೆ ವಿಶ್ವಾಸವಿಡದವರ ಮತ್ತು ಪರಲೋಕವನ್ನು ನಿರಾಕರಿಸುವವರ ಮಾರ್ಗವನ್ನು ಬಿಟ್ಟಿರುವೆನು.

قَالَ لَا يَاْتِيْكُمَا طَعَامٌ تُرْزَقٰنِهٖٓ اِلَّا نَبَّاْتُكُمَا بِتَاْوِيْلِهٖ قَبْلَ اَنْ يَّاْتِيَكُمَا ۗ ذٰلِكُمَا مِمَّا عَلَّمَنِيْ رَبِّيْ ۗ اِنِّيْ تَرَكْتُ مِلَّةَ قَوْمٍ لَّا يُؤْمِنُوْنَ بِاللّٰهِ وَهُمْ بِالْاٰخِرَةِ هُمْ كٰفِرُوْنَ ﴿٣٧﴾

38. ಮತ್ತು ನಮ್ಮ ಪೂರ್ವಜರಾಗಿರುವ ಇಬ್‌ರಾಹೀಮ್, ಇಸ್‌ಹಾಕ್ ಮತ್ತು ಯಅ್‌ಕೂಬರ ಮಾರ್ಗವನ್ನು ಅವಲಂಬಿಸಿದ್ದೇನೆ. ಅಲ್ಲಾಹನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿಸುವುದು ನಮ್ಮ ಕೆಲಸವಲ್ಲ. ವಾಸ್ತವದಲ್ಲಿ ಇದು (ಅಲ್ಲಾಹನು ನಮ್ಮನ್ನು ತನ್ನ ಹೊರತು ಇನ್ನಾರದೇ ದಾಸರಾಗಿ ಮಾಡದಿರುವುದು) ನಮ್ಮ ಮೇಲೆ ಮತ್ತು ಸಕಲ ಮಾನವರ ಮೇಲೆ ಅಲ್ಲಾಹನ ಅನುಗ್ರಹವಾಗಿದೆ. ಆದರೆ ಹೆಚ್ಚಿನವರು ಕೃತಜ್ಞತೆ ಸಲ್ಲಿಸುವುದಿಲ್ಲ.

وَاتَّبَعْتُ مِلَّةَ اٰبَآءِيْٓ اِبْرٰهِيْمَ وَاِسْحٰقَ وَيَعْقُوْبَ ۗ مَا كَانَ لَنَآ اَنْ نُّشْرِكَ بِاللّٰهِ مِنْ شَيْءٍ ۗ ذٰلِكَ مِنْ فَضْلِ اللّٰهِ عَلَيْنَا وَعَلَى النَّاسِ وَلٰكِنَّ اَكْثَرَ النَّاسِ لَا يَشْكُرُوْنَ ﴿٣٨﴾

39. ಓ ಸೆರೆಮನೆಯ ನನ್ನ ಸಂಗಾತಿಗಳೇ, "ಅನೇಕ ಭಿನ್ನ ಭಿನ್ನ ಪ್ರಭುಗಳು ಲೇಸೋ ಅಥವಾ ಸರ್ವ ಸಮರ್ಥನಾದ ಏಕ ಅಲ್ಲಾಹನೋ? ಎಂದು ನೀವು ಸ್ವತಃ ಯೋಚಿಸಿರಿ.

يٰصَاحِبَيِ السِّجْنِ ءَاَرْبَابٌ مُّتَفَرِّقُوْنَ خَيْرٌ اَمِ اللّٰهُ الْوَاحِدُ الْقَهَّارُ ﴿٣٩﴾

40. ಅವನನ್ನು ಬಿಟ್ಟು ನೀವು ಯಾರ ದಾಸ್ಯ-ಆರಾಧನೆ ಮಾಡುತ್ತಿರುವಿರೋ ಅವರೆಲ್ಲಾ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಿರುವ ಕೆಲವು ಹೆಸರುಗಳ ವಿನಾ ಇನ್ನೇನೂ ಅಲ್ಲ. ಅಲ್ಲಾಹನು ಅವುಗಳ ಬಗ್ಗೆ ಯಾವ ಪ್ರಮಾಣವನ್ನೂ ಇಳಿಸಿರುವುದಿಲ್ಲ. ಆಜ್ಞಾಧಿಕಾರವು ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ. ಇದೇ ಅಪ್ಪಟ ಋಜು ಜೀವನ ಮಾರ್ಗ. ಆದರೆ ಹೆಚ್ಚಿನ ಜನರು ಅರಿಯುವುದಿಲ್ಲ.

مَا تَعْبُدُوْنَ مِنْ دُوْنِهٖٓ اِلَّآ اَسْمَآءً سَمَّيْتُمُوْهَآ اَنْتُمْ وَاٰبَآؤُكُمْ مَّآ اَنْزَلَ اللّٰهُ بِهَا مِنْ سُلْطٰنٍ ۗ اِنِ الْحُكْمُ اِلَّا لِلّٰهِ ۗ اَمَرَ اَلَّا تَعْبُدُوْٓا اِلَّآ اِيَّاهُ ۗ ذٰلِكَ الدِّيْنُ الْقَيِّمُ وَلٰكِنَّ اَكْثَرَ النَّاسِ لَا يَعْلَمُوْنَ ﴿٤٠﴾

41. ಓ ಸೆರೆಮನೆಯ ನನ್ನ ಸಂಗಾತಿಗಳೇ, ನಿಮ್ಮ ಸ್ವಪ್ನ ಫಲವಿದು: ನಿಮ್ಮಲ್ಲೊರ್ವನು ತನ್ನ ಪ್ರಭುವಿಗೆ (ಈಜಿಪ್ಟ್‌ನ ದೊರೆಗೆ)[11] ಮದ್ಯ ಕುಡಿಸುವನು. ಇನ್ನೊಬ್ಬನು ಗಲ್ಲಿಗೇರಿಸಲ್ಪಡುವನು ಮತ್ತು ಪಕ್ಷಿಗಳು ಅವನ ತಲೆಯನ್ನು ಕುಕ್ಕಿ ಕುಕ್ಕಿ ತಿನ್ನುವುವು. ನೀವು ಕೇಳುತ್ತಲಿದ್ದ ವಿಷಯದ ತೀರ್ಮಾನ ಆಗಿ ಹೋಯಿತು."

يٰصَاحِبَيِ السِّجْنِ اَمَّآ اَحَدُكُمَا فَيَسْقِىْ رَبَّهٗ خَمْرًا ۚ وَ اَمَّا الْاٰخَرُ فَيُصْلَبُ فَتَاْكُلُ الطَّيْرُ مِنْ رَّاْسِهٖ ؕ قُضِىَ الْاَمْرُ الَّذِىْ فِيْهِ تَسْتَفْتِيٰنِ ﴿٤١﴾

42. ಅನಂತರ, ಅವರ ಪೈಕಿ ಯಾರು ಬಿಡುಗಡೆಯಾಗುವನೆಂಬ ನಿರೀಕ್ಷೆಯಿತ್ತೋ ಅವನೊಡನೆ ಯೂಸುಫ್‌ರು, "ನಿನ್ನ ಪ್ರಭುವಿನೊಡನೆ (ಈಜಿಪ್ಟ್‌ನ ದೊರೆ) ನನ್ನ ಪ್ರಸ್ತಾಪವೆತ್ತಬೇಕು" ಎಂದು ಹೇಳಿದರು. ಆದರೆ ಶೈತಾನನು ಅವನಿಗೆ ಮರವೆಯನ್ನುಂಟು ಮಾಡಿಬಿಟ್ಟನು. ಅವನು ತನ್ನ ಪ್ರಭುವಿನೊಡನೆ (ಈಜಿಪ್ಟ್‌ನ ದೊರೆ) ಯೂಸುಫರ ಪ್ರಸ್ತಾಪವೆತ್ತಲು ಮರೆತೇ ಬಿಟ್ಟನು. ಹೀಗೆ ಅವರು ಅನೇಕ ವರ್ಷಗಳ ವರೆಗೆ ಸೆರೆಮನೆಯಲ್ಲೇ ಉಳಿದುಬಿಟ್ಟರು.

وَقَالَ لِلَّذِىْ ظَنَّ اَنَّهٗ نَاجٍ مِّنْهُمَا اذْكُرْنِىْ عِنْدَ رَبِّكَ ۫ فَاَنْسٰهُ الشَّيْطٰنُ ذِكْرَ رَبِّهٖ فَلَبِثَ فِى السِّجْنِ بِضْعَ سِنِيْنَ ﴿٤٢﴾ ع ١٥

43. ಒಂದು ದಿನ[12] ಅರಸನು, "ನಾನು ಸ್ವಪ್ನದಲ್ಲಿ ಏಳು ಕೊಬ್ಬಿದ ಹಸುಗಳನ್ನು ಏಳು ಕೃಶವಾದ ಹಸುಗಳು ತಿನ್ನುತ್ತಿರುವುದನ್ನೂ ಧಾನ್ಯದ ಏಳು ತೆನೆಗಳು ಹಸುರಾಗಿದ್ದು ಇತರ ಏಳು ತೆನೆಗಳು ಒಣಗಿರುವುದನ್ನೂ ಕಂಡಿರುತ್ತೇನೆ. ಓ ನನ್ನ ಆಸ್ಥಾನದವರೇ, ನೀವು ಸ್ವಪ್ನಗಳ ಫಲ ಬಲ್ಲವರಾಗಿದ್ದರೆ, ನನಗೆ ಈ ಸ್ವಪ್ನದ ಫಲವನ್ನು ಹೇಳಿರಿ" ಎಂದನು.

وَقَالَ الْمَلِكُ اِنِّىْٓ اَرٰى سَبْعَ بَقَرٰتٍ سِمَانٍ يَّاْكُلُهُنَّ سَبْعٌ عِجَافٌ وَّ سَبْعَ سُنْۢبُلٰتٍ خُضْرٍ وَّ اُخَرَ يٰبِسٰتٍ ؕ يٰٓاَيُّهَا الْمَلَاُ اَفْتُوْنِىْ فِىْ رُءْيَاىَ اِنْ كُنْتُمْ لِلرُّءْيَا تَعْبُرُوْنَ ﴿٤٣﴾

44. ಆಗ ಜನರು, "ಗೊಂದಲಪೂರ್ಣ ಸ್ವಪ್ನಗಳಿವು. ಇಂತಹ ಸ್ವಪ್ನಗಳ ಫಲ ನಮಗೆ ತಿಳಿಯದು" ಎಂದರು.

قَالُوْٓا اَضْغَاثُ اَحْلَامٍ ۚ وَمَا نَحْنُ بِتَاْوِيْلِ الْاَحْلَامِ بِعٰلِمِيْنَ ﴿٤٤﴾

45. ಆ ಇಬ್ಬರು ಸೆರೆಯಾಳುಗಳ ಪೈಕಿ ಬದುಕಿ ಉಳಿದಿದ್ದವನಿಗೆ ದೀರ್ಘ ಕಾಲದ ತರುವಾಯ ಈಗ ಆ ಮಾತು ನೆನಪಿಗೆ ಬಂತು. ಅವನು, "ನಿಮಗೆ ಇದರ ಫಲ ನಾನು ಹೇಳುತ್ತೇನೆ. ನನ್ನನ್ನು ಸ್ವಲ್ಪ ಹೊತ್ತಿನ ಮಟ್ಟಿಗೆ (ಸೆರೆಮನೆಯಲ್ಲಿರುವ ಯೂಸುಫರ ಬಳಿಗೆ) ಕಳುಹಿಸಿರಿ" ಎಂದನು.

وَقَالَ الَّذِىْ نَجَا مِنْهُمَا وَادَّكَرَ بَعْدَ اُمَّةٍ اَنَا اُنَبِّئُكُمْ بِتَاْوِيْلِهٖ فَاَرْسِلُوْنِ ﴿٤٥﴾

11. ಸೂಕ್ತ 23ನ್ನು ಇದರೊಂದಿಗೆ ಸೇರಿಸಿ ಓದುವುದರಿಂದ ವ್ಯಕ್ತವಾಗುವುದೇನೆಂದರೆ, ಹ. ಯೂಸುಫ್(ಅ) ನನ್ನ ಪ್ರಭು ಎಂದು ಅಲ್ಲಾಹನ ಕುರಿತಾಗಿ ಹೇಳಿದ್ದರು. ಈಜಿಪ್ಟ್‌ನ ದೊರೆಯ ಗುಲಾಮನೊಂದಿಗೆ, "ನಿನ್ನ ಪ್ರಭುವಿಗೆ ಮದ್ಯ ಕುಡಿಸುವೆ" ಎಂದು ಈಜಿಪ್ಟಿನ ದೊರೆಯ ಕುರಿತಾಗಿ ಹೇಳಿದ್ದರು. ಏಕೆಂದರೆ ಆ ಜನರು ಈಜಿಪ್ಟಿನ ದೊರೆಯನ್ನೇ ತಮ್ಮ ಪ್ರಭುವೆಂದು ಭಾವಿಸುತ್ತಿದ್ದರು.

12. ಮಧ್ಯದಲ್ಲಿ ಅನೇಕ ವರ್ಷಗಳ ಸೆರೆಮನೆ ವಾಸದ ವೃತ್ತಾಂತವನ್ನು ಬಿಟ್ಟು ಇಲ್ಲಿ ನೇರವಾಗಿ ಹ. ಯೂಸುಫ್‌ರ(ಅ) ಲೌಕಿಕ ಉತ್ಥಾನ ಆರಂಭಗೊಂಡ ವೃತ್ತಾಂತದೊಂದಿಗೆ ಇದನ್ನು ಜೋಡಿಸಲಾಗುತ್ತದೆ.

46. ಅವನು ಹೋಗಿ ಯೂಸುಫರೊಡನೆ, "ಓ, ಸಾದ್ಯಂತ ಸತ್ಯ ಸಂಧರಾಗಿರುವವರೇ[13], ಏಳು ಕೊಬ್ಬಿದ ಹಸುಗಳನ್ನು ಏಳು ಕೃಶವಾದ ಹಸುಗಳು ತಿನ್ನುತ್ತಿವೆ ಮತ್ತು ಏಳು ತೆನೆಗಳು ಹಸುರಾಗಿಯೂ ಇನ್ನು ಏಳು ತೆನೆಗಳು ಒಣಗಿಯೂ ಇವೆ. ಈ ಸ್ವಪ್ನದ ಫಲವನ್ನು ನನಗೆ ಹೇಳಿರಿ. ಹಾಗಾದರೆ ನಾನು ಜನರ ಕಡೆಗೆ ಮರಳಬಹುದು ಮತ್ತು ಅವರು ತಿಳಿದು ಕೊಳ್ಳಬಹುದು"[14] ಎಂದನು.

يُوسُفُ أَيُّهَا الصِّدِّيقُ أَفْتِنَا فِي سَبْعِ بَقَرَاتٍ سِمَانٍ يَأْكُلُهُنَّ سَبْعٌ عِجَافٌ وَسَبْعِ سُنْبُلَاتٍ خُضْرٍ وَأُخَرَ يَابِسَاتٍ لَعَلِّي أَرْجِعُ إِلَى النَّاسِ لَعَلَّهُمْ يَعْلَمُونَ ﴿٤٦﴾

47. ಯೂಸುಫ್ ಹೇಳಿದರು- "ಏಳು ವರ್ಷಗಳ ತನಕ ನೀವು ನಿರಂತರವಾಗಿ ಕೃಷಿ ಮಾಡುತ್ತಿರುವಿರಿ. ಆ ಕಾಲಾವಧಿಯಲ್ಲಿ ನೀವು ಕೊಯ್ಯುವ ಬೆಳೆಯಿಂದ ನಿಮ್ಮ ಆಹಾರಕ್ಕೆ ಬೇಕಾದಷ್ಟು ಅಂಶವನ್ನು ತೆಗೆದು ಉಳಿದುದನ್ನು ಅದರ ತೆನೆಗಳಲ್ಲೇ ಇರಗೊಡಿರಿ.

قَالَ تَزْرَعُونَ سَبْعَ سِنِينَ دَأَبًا فَمَا حَصَدْتُمْ فَذَرُوهُ فِي سُنْبُلِهِ إِلَّا قَلِيلًا مِمَّا تَأْكُلُونَ ﴿٤٧﴾

48. ಅನಂತರ ಏಳು ಕಠಿಣ ವರ್ಷಗಳು ಬರುವುವು. ಆಗ ಆ ಕಾಲಕ್ಕಾಗಿ ಸಂಗ್ರಹಿಸಿಟ್ಟುದನ್ನು ಉಣ್ಣಬಹುದು. ಒಂದು ವೇಳೆ ಉಳಿಯುವುದಾದರೆ ನೀವು ಜೋಪಾನವಾಗಿರಿಸಿದುದು ಮಾತ್ರ.

ثُمَّ يَأْتِي مِنْ بَعْدِ ذَٰلِكَ سَبْعٌ شِدَادٌ يَأْكُلْنَ مَا قَدَّمْتُمْ لَهُنَّ إِلَّا قَلِيلًا مِمَّا تُحْصِنُونَ ﴿٤٨﴾

49. ಅನಂತರ ಬರುವ ಇನ್ನೊಂದು ವರ್ಷದಲ್ಲಿ ಕೃಪಾವೃಷ್ಟಿಯ ಮೂಲಕ ಜನರ ಸಂಕಷ್ಟ ನಿವಾರಣೆಯಾಗುವುದು ಮತ್ತು ಅವರು ರಸ ಹಿಂಡುವರು."

ثُمَّ يَأْتِي مِنْ بَعْدِ ذَٰلِكَ عَامٌ فِيهِ يُغَاثُ النَّاسُ وَفِيهِ يَعْصِرُونَ ﴿٤٩﴾

50. ಅರಸನು, "ಅವರನ್ನು ನನ್ನ ಬಳಿಗೆ ಕರೆದು ತನ್ನಿರಿ" ಎಂದನು. ಆದರೆ ರಾಜದೂತನು ಯೂಸುಫರ ಬಳಿಗೆ ಬಂದಾಗ ಅವರು, (ಹೀಗೆ) ಹೇಳಿದರು, "ನಿನ್ನ ಪ್ರಭುವಿನ ಬಳಿಗೆ ನೀನು ಹಿಂದಿರುಗು ಮತ್ತು ತಮ್ಮ ಕೈಗಳನ್ನು ಕೊಯ್ದುಕೊಂಡ ಸ್ತ್ರೀಯರ ಸಂಗತಿ ಯೇನೆಂದು ಅವನೊಡನೆ ಕೇಳು. ನನ್ನ ಪ್ರಭುವಂತು ಅವರ ಕುತಂತ್ರಗಳನ್ನು ತಿಳಿದೇ ಇದ್ದಾನೆ."

وَقَالَ الْمَلِكُ ائْتُونِي بِهِ فَلَمَّا جَاءَهُ الرَّسُولُ قَالَ ارْجِعْ إِلَىٰ رَبِّكَ فَاسْأَلْهُ مَا بَالُ النِّسْوَةِ اللَّاتِي قَطَّعْنَ أَيْدِيَهُنَّ إِنَّ رَبِّي بِكَيْدِهِنَّ عَلِيمٌ ﴿٥٠﴾

13. ಮೂಲದಲ್ಲಿ 'ಸಿದ್ದೀಕ್' ಎಂಬ ಪದ ಪ್ರಯೋಗವಾಗಿದೆ. ಅರಬಿ ಭಾಷೆಯಲ್ಲಿ ಅದು ಸತ್ಯಸಂಧತೆ ಮತ್ತು ಉನ್ನತ ಮಟ್ಟದ ಸನ್ನಡತೆಗೆ ಉಪಯೋಗಿಸಲ್ಪಡುತ್ತದೆ. ಇದರಿಂದ ಅವನು ಸೆರಮನೆವಾಸದ ಅವಧಿಯಲ್ಲಿ ಹ. ಯೂಸುಫ್‌ರ(ಅ) ಸಚ್ಚಾರಿತ್ರ್ಯದಿಂದ ಎಷ್ಟು ಗಹನವಾಗಿ ಪ್ರಭಾವಿತನಾಗಿದ್ದನು ಮತ್ತು ದೀರ್ಘಾವಧಿ ಕಳೆದ ಬಳಿಕವೂ ಅದು ಹೇಗೆ ಅವನಲ್ಲಿ ಅಚ್ಚಳಿಯದೆ ಉಳಿದಿತ್ತು ಎಂದು ವ್ಯಕ್ತವಾಗುತ್ತದೆ.

14. ಅರ್ಥಾತ್- ಅವರು ತಮ್ಮ ಸ್ಥಾನಮಾನವನ್ನು ತಿಳಿಯುವಂತಾಗಲಿ. "ಇವರು ಎಂತಹ ಉನ್ನತ ವ್ಯಕ್ತಿ ಮತ್ತು ಇವರನ್ನು ಎಂತಹ ಜಾಗದಲ್ಲಿ ಬಂಧಿಸಿಡಲಾಗಿದೆ" ಎಂಬ ಪ್ರಜ್ಞೆ ಅವರಲ್ಲಿ ಮೂಡುವಂತಾಗಲಿ. ಹೀಗೆ ಸೆರೆಮನೆಯಲ್ಲಿ ನಾನು ತಮ್ಮೊಡನೆ ಮಾಡಿದಂತಹ ವಾಗ್ದಾನವನ್ನು ಈಡೇರಿಸುವಂತಹ ಅವಕಾಶ ನನಗೆ ಸಿಗಲಿ.

51. ಆ ಪ್ರಕಾರ ಅರಸನು ಆ ಸ್ತ್ರೀಯರೊಡನೆ, "ನೀವು ಯೂಸುಫರನ್ನು ವಶೀಕರಿಸಲು ಪ್ರಯತ್ನಿಸಿದಾಗಿನ ನಿಮ್ಮ ಅನುಭವವೇನು?" ಎಂದು ಕೇಳಿದನು. ಎಲ್ಲರೂ ಒಕ್ಕೊರಳಿನಿಂದ, "ಎಷ್ಟಕ್ಕೂ ಇಲ್ಲ, ನಾವು ಅವರಲ್ಲಿ ಯಾವ ದೋಷವನ್ನೂ ಕಾಣಲಿಲ್ಲ" ಎಂದರು. ಅಝೀಝುನ ಪತ್ನಿಯು, "ಈಗ ಸತ್ಯವು ಬಯಲಾಗಿದೆ. ಅವರನ್ನು ಪುಸಲಾಯಿಸಲು ಪ್ರಯತ್ನಿಸಿದವಳು ನಾನೇ ಆಗಿದ್ದೆ. ಖಂಡಿತವಾಗಿಯೂ ಅವರು ಸತ್ಯ ಸಂಧರು" ಎಂದು ಹೇಳಿದಳು.

قَالَ مَا خَطْبُكُنَّ إِذْ رَاوَدتُّنَّ يُوسُفَ عَن نَّفْسِهِ ۚ قُلْنَ حَاشَ لِلَّهِ مَا عَلِمْنَا عَلَيْهِ مِن سُوءٍ ۚ قَالَتِ امْرَأَتُ الْعَزِيزِ الْآنَ حَصْحَصَ الْحَقُّ أَنَا رَاوَدتُّهُ عَن نَّفْسِهِ وَإِنَّهُ لَمِنَ الصَّادِقِينَ ﴿٥١﴾

52. ಯೂಸುಫ್ ಹೇಳಿದರು, "ಇದರ ಉದ್ದೇಶವು ನಾನು ತೆರೆಯ ಮರೆಯಲ್ಲಿ ಅಝೀಝುನಿಗೆ ವಿಶ್ವಾಸಘಾತಕವೆಸಗಲಿಲ್ಲವೆಂದೂ ಅಲ್ಲಾಹನು ವಿಶ್ವಾಸಘಾತಕರ ಕುತಂತ್ರವನ್ನು ಸಫಲ ಗೊಳಿಸಲು ಬಿಡುವುದಿಲ್ಲವೆಂದೂ (ಅಝೀಝ್) ತಿಳಿದುಕೊಳ್ಳಬೇಕೆಂಬುದಾಗಿತ್ತು.

ذَٰلِكَ لِيَعْلَمَ أَنِّي لَمْ أَخُنْهُ بِالْغَيْبِ وَأَنَّ اللَّهَ لَا يَهْدِي كَيْدَ الْخَائِنِينَ ﴿٥٢﴾

الجزء ١٣

53. *ನನ್ನ ಚಿತ್ತವು ನಿರ್ದೋಷಿಯೆಂದು ನಾನೇನೂ ಹೇಳಿಕೊಳ್ಳುವುದಿಲ್ಲ. ನನ್ನ ಪ್ರಭುವಿನ ಕೃಪೆಯಿಲ್ಲದೆ ಹೋದರೆ ಚಿತ್ತವಂತು ಕೇಡಿನ ಕಡೆಗೇ ಪ್ರೇರೇಪಿಸುತ್ತದೆ. ನಿಶ್ಚಯವಾಗಿಯೂ ನನ್ನ ಪ್ರಭು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."

وَمَا أُبَرِّئُ نَفْسِي ۚ إِنَّ النَّفْسَ لَأَمَّارَةٌ بِالسُّوءِ إِلَّا مَا رَحِمَ رَبِّي ۚ إِنَّ رَبِّي غَفُورٌ رَّحِيمٌ ﴿٥٣﴾

54. ಅರಸನು ಹೇಳಿದನು, "ಅವನನ್ನು ನನ್ನ ಬಳಿಗೆ ಕರೆತನ್ನಿರಿ. ನಾನು ಅವನನ್ನು ನನಗಾಗಿ ಕಾಯ್ದಿರಿಸಿಕೊಳ್ಳುತ್ತೇನೆ." ಯೂಸುಫರು ಅವನೊಡನೆ ಮಾತುಕತೆ ನಡೆಸಿದಾಗ ಅವನು ಹೀಗೆಂದನು, "ಇಂದು ತಾವು ನಮ್ಮಲ್ಲಿ ಗೌರವಾನ್ವಿತರಾಗಿರುತ್ತೀರಿ ಮತ್ತು ತಮ್ಮ ಪ್ರಾಮಾಣಿಕತೆಯ ಬಗ್ಗೆ ಸಂಪೂರ್ಣ ಭರವಸೆಯಿದೆ."

وَقَالَ الْمَلِكُ ائْتُونِي بِهِ أَسْتَخْلِصْهُ لِنَفْسِي ۖ فَلَمَّا كَلَّمَهُ قَالَ إِنَّكَ الْيَوْمَ لَدَيْنَا مَكِينٌ أَمِينٌ ﴿٥٤﴾

55. ಯೂಸುಫ್ ಹೇಳಿದರು, "ದೇಶದ ಭಂಡಾರಗಳನ್ನು ನನ್ನ ವಶಕ್ಕೆ ಬಿಡಿರಿ. ನಿಶ್ಚಯವಾಗಿಯೂ ನಾನು ರಕ್ಷಣೆ ಮಾಡುವವನೂ ತಿಳುವಳಿಕೆಯುಳ್ಳವನೂ ಆಗಿರುತ್ತೇನೆ."

قَالَ اجْعَلْنِي عَلَىٰ خَزَائِنِ الْأَرْضِ ۖ إِنِّي حَفِيظٌ عَلِيمٌ ﴿٥٥﴾

*ಇಲ್ಲಿಂದ **13**ನೆಯ ಕಾಂಡ ಆರಂಭ.

56. ಹೀಗೆ ನಾವು ಯೂಸುಫರಿಗೆ ಆ ಭೂಭಾಗದ ಅಧಿಕಾರವನ್ನು ಸುಗಮಗೊಳಿಸಿದೆವು. ಅಲ್ಲಿ ತನಗೆ ಸರಿಕಂಡಲ್ಲೆಲ್ಲ ಸ್ಥಳ ಮಾಡಿ ಕೊಳ್ಳಲು ಅವರು ಅಧಿಕಾರ ಹೊಂದಿದ್ದರು.[15] ನಾವು ನಮಗಿಷ್ಟ ವಿದ್ದವರಿಗೆ ನಮ್ಮ ಕೃಪೆಯನ್ನು ಕರುಣಿಸುತ್ತೇವೆ. ನಮ್ಮಲ್ಲಿ ಸದ್ಭಕ್ತರ ಪ್ರತಿಫಲವು ನಷ್ಟಗೊಳಿಸಲ್ಪಡುವುದಿಲ್ಲ.

وَكَذَٰلِكَ مَكَّنَّا لِيُوسُفَ فِي الْأَرْضِ ۚ
يَتَبَوَّأُ مِنْهَا حَيْثُ يَشَاءُ ۚ نُصِيبُ بِرَحْمَتِنَا
مَن نَّشَاءُ ۖ وَلَا نُضِيعُ أَجْرَ الْمُحْسِنِينَ ٥٦

57. ಸತ್ಯವಿಶ್ವಾಸವನ್ನಿರಿಸಿ, ದೇವಭಯದೊಂದಿಗೆ ಕಾರ್ಯಪ್ರವೃತ್ತ ರಾಗುವವರಿಗೆ ಪರಲೋಕದ ಪ್ರತಿಫಲವು ಇನ್ನಷ್ಟು ಉತ್ತಮ ವಾಗಿರುತ್ತದೆ.

وَلَأَجْرُ الْآخِرَةِ خَيْرٌ لِّلَّذِينَ آمَنُوا
وَكَانُوا يَتَّقُونَ ٥٧ ೬

58. ಯೂಸುಫರ ಸಹೋದರರು ಈಜಿಪ್ಟ್‌ಗೆ ಬಂದರು ಮತ್ತು ಇವರ ಮುಂದೆ ಹಾಜರಾದರು.[16] ಇವರು ಅವರನ್ನು ಗುರುತಿಸಿದರು. ಆದರೆ ಅವರಿಗೆ ಇವರ ಗುರುತು ಸಿಗಲಿಲ್ಲ.

وَجَاءَ إِخْوَةُ يُوسُفَ فَدَخَلُوا عَلَيْهِ
فَعَرَفَهُمْ وَهُمْ لَهُ مُنكِرُونَ ٥٨

59. ಇವರು ಅವರ ಸರಕುಗಳನ್ನೆಲ್ಲಾ ಸಿದ್ಧಗೊಳಿಸಿದ ಬಳಿಕ ಹೊರಡು ವಾಗ ಹೀಗೆ ಹೇಳಿದರು, "ನಿಮ್ಮ ಮಲ ಸಹೋದರನನ್ನು ನನ್ನ ಬಳಿಗೆ ಕರೆ ತರಬೇಕು. ನಾನು ಹೇಗೆ ಅಳತೆ ಪಾತ್ರೆ ತುಂಬಿ ಕೊಡು ತ್ತೇನೆಂದೂ ಎಷ್ಟು ಉತ್ತಮ ಆತಿಥೇಯನಾಗಿದ್ದೇನೆಂಬುದನ್ನೂ ಕಾಣುತ್ತೀರಲ್ಲವೆ?

وَلَمَّا جَهَّزَهُم بِجَهَازِهِمْ قَالَ ائْتُونِي
بِأَخٍ لَّكُم مِّنْ أَبِيكُمْ ۚ أَلَا تَرَوْنَ أَنِّي
أُوفِي الْكَيْلَ وَأَنَا خَيْرُ الْمُنزِلِينَ ٥٩

60. ನೀವು ಅವನನ್ನು ಕರೆತರದಿದ್ದರೆ ನನ್ನಲ್ಲಿ ನಿಮಗೆ ಧಾನ್ಯವಿಲ್ಲ. ಮಾತ್ರವಲ್ಲ ನೀವು ನನ್ನ ಬಳಿ ಸುಳಿಯಲೂ ಬಾರದು."[17]

فَإِن لَّمْ تَأْتُونِي بِهِ فَلَا كَيْلَ لَكُمْ
عِندِي وَلَا تَقْرَبُونِ ٦٠

15. ಅರ್ಥಾತ್- ಈಗ ಸಮಸ್ತ ಈಜಿಪ್ಟ್ ದೇಶ ಅವರದಾಗಿತ್ತು. ಅದರ ಎಲ್ಲಾ ಪ್ರದೇಶಗಳನ್ನು ಅವರು ತನ್ನದೆಂದು ಹೇಳಬಹುದಾಗಿತ್ತು. ದೇಶದ ಯಾವ ಮೂಲೆಯಲ್ಲೂ ಅವರನ್ನು ತಡೆಯಲು ಸಾಧ್ಯವಿರಲಿಲ್ಲ. ಇದು ಹ. ಯೂಸುಫ್‌ರಿಗೆ(ಅ) ಆ ದೇಶದಲ್ಲಿ ಪ್ರಾಪ್ತವಾಗಿದ್ದ ಸಾರ್ವಭೌಮ ಅಧಿಕಾರ ಮತ್ತು ಸಂಪೂರ್ಣ ಪ್ರಾಬಲ್ಯದ ವಿವರಣೆಯಾಗಿದೆ. ಪುರಾತನ ಕಾಲದ ವ್ಯಾಖ್ಯಾನಕಾರರೂ ಈ ಸೂಕ್ತವನ್ನು ಹೀಗೆಯೇ ವ್ಯಾಖ್ಯಾನಿಸಿದ್ದಾರೆ. ಇಬ್ನ್ ಝೈದ್ ಇದನ್ನು ಹೀಗೆ ವಿವರಿಸಿದ್ದಾರೆ, "ನಾವು ಯೂಸುಫ್‌ರನ್ನು ಈಜಿಪ್ಟ್‌ನಲ್ಲಿದ್ದ ಸರ್ವಸ್ವದ ಮಾಲಕನನ್ನಾಗಿ ಮಾಡಿದೆವು. ಲೋಕದ ಆ ಭೂಭಾಗದಲ್ಲಿ ಅವರು ತನಗೆ ತೋಚಿದ್ದನ್ನು ಮಾಡಬಹುದಾಗಿತ್ತು. ಆ ಸಾಮ್ರಾಜ್ಯವನ್ನೇ ಅವರ ವಶಕ್ಕೊಪ್ಪಿಸಲಾಯಿತು. ಫಿರ್‌ಔನನನ್ನು ತನ್ನ ಅಧೀನಗೊಳಿಸಿ ತಾನು ಅವನಿಗಿಂತ ಉನ್ನತ ಪದವಿಯವರಾಗಿ ಬಿಡಲಿಕ್ಕೂ ಅವರಿಗೆ ಸಾಧ್ಯವಿತ್ತು." ಇನ್ನೊರ್ವ ವ್ಯಾಖ್ಯಾನಕಾರರಾದ ಮುಜಾಹಿದ್‌ರ ಪ್ರಕಾರ ಈಜಿಪ್ಟ್‌ನ ದೊರೆ ಹ. ಯೂಸುಫ್‌ರ(ಅ) ಮೂಲಕ ಇಸ್ಲಾಮ್ ಸ್ವೀಕಾರ ಮಾಡಿದ್ದನು.

16. ಇಲ್ಲಿಂದ ಏಳೆಂಟು ವರ್ಷದ ಘಟನಾವಳಿಗಳನ್ನು ಮಧ್ಯದಲ್ಲಿ ಬಿಟ್ಟು ವಿವರಣಾ ಸರಣಿಯನ್ನು ಬನೀಇಸ್ರಾಈಲರು ಈಜಿಪ್ಟ್‌ಗೆ ಹೋಗಲಾರಂಭಿಸಿದ ಸಂದರ್ಭದೊಂದಿಗೆ ಜೋಡಿಸಲಾಗಿದೆ.

17. ಈ ಮಾತನ್ನು ಹ. ಯೂಸುಫ್(ಅ) ಏಕೆ ಹೇಳಿರಬಹುದೆಂದರೆ, ಬರದಿಂದಾಗಿ ಈಜಿಪ್ಟ್‌ನಲ್ಲಿ ಧಾನ್ಯಕ್ಕೆ ನಿಯಂತ್ರಣವಿತ್ತು. ಧಾನ್ಯವನ್ನು ಪಡೆಯಲಿಕ್ಕಾಗಿ ಈ ಹತ್ತು ಮಂದಿ ಸಹೋದರರು ಬಂದಿದ್ದರು. ಆದರೆ ಅವರು ತಮ್ಮ ತಂದೆ ಮತ್ತು ಹನ್ನೊಂದನೇ ಸಹೋದರನ ಪಾಲನ್ನೂ ಕೇಳುತ್ತಿದ್ದಿರಬಹುದು. ಆಗ ಹ. ಯೂಸುಫ್(ಅ) ನಿಮ್ಮ ತಂದೆ ಸ್ವತಃ ಬಾರದಿರುವ ನೆವನವೇನೋ ಸತ್ಯವಾಗಿರಬಹುದು. ಏಕೆಂದರೆ ಅವರು ವೃದ್ಧರೂ ಅಂಧರೂ ಆಗಿದ್ದಾರೆ. ಆದರೆ ಸಹೋದರ ಬಾರದಿರುವುದಕ್ಕೆ ಸಮರ್ಪಕವಾದ ಯಾವ ಕಾರಣವಿದೆ? ಇರಲಿ. ಈ ಸಂದರ್ಭದಲ್ಲಿ ನಿಮ್ಮ ಮಾತಿನ ಮೇಲೆ ವಿಶ್ವಾಸವಿಟ್ಟು ನಿಮಗೆ ಸಂಪೂರ್ಣ ಧಾನ್ಯವನ್ನು ನೀಡುತ್ತೇವೆ. ಆದರೆ ಮುಂದಿನ ಬಾರಿ

61. ಅವರು ಹೇಳಿದರು, "ತಂದೆಯವರು ಅವನನ್ನು ಕಳುಹಿಸಲು ಒಪ್ಪುವಂತೆ ಮಾಡಲು ಪ್ರಯತ್ನಿಸುವೆವು. ಹೀಗೆ ನಾವು ಮಾಡಿಯೇ ತೀರುವೆವು."

قَالُوا سَنُرَاوِدُ عَنْهُ أَبَاهُ وَإِنَّا لَفَاعِلُونَ ٦١

62. ಧಾನ್ಯದ ಪ್ರತಿಯಾಗಿ ಅವರು ಕೊಟ್ಟಿದ್ದ ಮೊಬಲಗನ್ನು ಅವರ ಸರಕಿನಲ್ಲೇ ಗುಟ್ಟಾಗಿ ಇರಿಸಿಬಿಡಿರೆಂದು ಯೂಸುಫರು ತನ್ನ ಗುಲಾಮರೊಡನೆ ಹೇಳಿದರು. ಅವರು ಮನೆಗೆ ತಲುಪಿದಾಗ ತಮಗೆ ಮರಳಿ ಸಿಕ್ಕಿದ ಮೊಬಲಗನ್ನು ಗುರುತಿಸಿಕೊಳ್ಳುವರು (ಅಥವಾ ಈ ಔದಾರ್ಯಕ್ಕಾಗಿ ಕೃತಜ್ಞರಾಗುವರು) ಮತ್ತು ಪುನಃ ಮರಳಿ ಬರಲೂಬಹುದೆಂಬ ನಿರೀಕ್ಷೆಯಿಂದ ಯೂಸುಫ್ ಹೀಗೆ ಮಾಡಿದ್ದರು.

وَقَالَ لِفِتْيَانِهِ اجْعَلُوا بِضَاعَتَهُمْ فِي رِحَالِهِمْ
لَعَلَّهُمْ يَعْرِفُونَهَا إِذَا انْقَلَبُوا إِلَىٰ أَهْلِهِمْ
لَعَلَّهُمْ يَرْجِعُونَ ٦٢

63. ಅವರು ತಮ್ಮ ತಂದೆಯವರ ಬಳಿಗೆ ಹೋದಾಗ ಹೀಗೆಂದರು, "ಅಪ್ಪಾ, ಇನ್ನು ಮುಂದೆ ನಮಗೆ ಧಾನ್ಯ ಕೊಡಲು ನಿರಾಕರಿಸಲಾಗಿದೆ. ಆದುದರಿಂದ ನಾವು ಧಾನ್ಯವನ್ನು ತರುವಂತಾಗಲು ತಾವು ನಮ್ಮ ಸಂಗಡ ನಮ್ಮ ಸಹೋದರನನ್ನು ಕಳುಹಿಸಿ ಕೊಡಿರಿ. ಅವನ ರಕ್ಷಣೆಗೆ ನಾವು ಹೊಣೆಗಾರರು."

فَلَمَّا رَجَعُوا إِلَىٰ أَبِيهِمْ قَالُوا يَا أَبَانَا مُنِعَ مِنَّا
الْكَيْلُ فَأَرْسِلْ مَعَنَا أَخَانَا نَكْتَلْ وَإِنَّا
لَهُ لَحَافِظُونَ ٦٣

64. ಆಗ ತಂದೆಯು, "ನಾನು ಇದಕ್ಕೆ ಮುಂಚೆ ಇವನ ಅಣ್ಣನ ವಿಷಯದಲ್ಲಿ ನಿಮ್ಮ ಮೇಲೆ ಭರವಸೆಯನ್ನಿರಿಸಿದ್ದಂತೆಯೇ ಇವನ ವಿಷಯದಲ್ಲೂ ಇಡಬೇಕೇ? ಅಲ್ಲಾಹನೇ ಅತ್ಯುತ್ತಮ ರಕ್ಷಕನು ಮತ್ತು ಅವನು ಎಲ್ಲರಿಗಿಂತಲೂ ಹೆಚ್ಚು ಕರುಣಾಳುವಾಗಿರುತ್ತಾನೆ" ಎಂದರು.

قَالَ هَلْ آمَنُكُمْ عَلَيْهِ إِلَّا كَمَا أَمِنْتُكُمْ عَلَىٰ
أَخِيهِ مِنْ قَبْلُ ۖ فَاللَّهُ خَيْرٌ حَافِظًا ۖ وَهُوَ
أَرْحَمُ الرَّاحِمِينَ ٦٤

65. ತರುವಾಯ ಅವರು ತಮ್ಮ ಸರಕನ್ನು ಬಿಚ್ಚಿದಾಗ ಅವರ ಮೊಬಲಗು ಅವರಿಗೆ ಹಿಂದಿರುಗಿಸಲ್ಪಟ್ಟಿರುವುದನ್ನು ಕಂಡು, "ಅಪ್ಪಾ, ನಮಗೆ ಇನ್ನೇನು ಬೇಕು? ಇಲ್ಲಿ ನೋಡಿರಿ. ನಮ್ಮ ಹಣವನ್ನೂ ನಮಗೆ ಹಿಂದಿರುಗಿಸಲಾಗಿದೆ. ನಾವಿನ್ನು ಹೋಗುವೆವು. ನಮ್ಮ ಕುಟುಂಬಕ್ಕಾಗಿ ಆಹಾರ ಧಾನ್ಯ ತರುವೆವು. ನಮ್ಮ ಸಹೋದರನ ರಕ್ಷಣೆಯನ್ನೂ ಮಾಡುವೆವು ಮತ್ತು ಒಂದು ಒಂಟೆ ಹೊರೆಯನ್ನು ಹೆಚ್ಚುವರಿಯಾಗಿ ತರುವೆವು. ಇಷ್ಟು ಧಾನ್ಯದ ಹೆಚ್ಚಳವು ಸುಲಭವಾಗಿ ಆಗಿಬಿಡುವುದು" ಎಂದು ಉದ್ಗರಿಸಿದರು.

وَلَمَّا فَتَحُوا مَتَاعَهُمْ وَجَدُوا بِضَاعَتَهُمْ
رُدَّتْ إِلَيْهِمْ ۖ قَالُوا يَا أَبَانَا مَا نَبْغِي ۖ هَٰذِهِ
بِضَاعَتُنَا رُدَّتْ إِلَيْنَا ۖ وَنَمِيرُ أَهْلَنَا وَنَحْفَظُ
أَخَانَا وَنَزْدَادُ كَيْلَ بَعِيرٍ ۖ ذَٰلِكَ كَيْلٌ يَسِيرٌ ٦٥

ನೀವು ಅವನನ್ನು ಜತೆಯಲ್ಲಿ ತರದಿದ್ದರೆ ನಿಮ್ಮ ಮೇಲಿನ ವಿಶ್ವಾಸ ಇರಲಾರದು ಮತ್ತು ನಿಮಗೆ ಧಾನ್ಯವೂ ಸಿಗಲಾರದು ಎಂದು ಹೇಳಿರಬಹುದು.

66. ಅವರ ತಂದೆ ಹೇಳಿದರು- "ನೀವೇ ಆಕ್ರಮಣಕ್ಕೊಳಗಾಗಿ ಬಿಡುವುದರ ಹೊರತು ಅವನನ್ನು ನನ್ನ ಬಳಿಗೆ ಮರಳಿ ಕರೆತಂದೇ ತೀರುವಿರೆಂದು ನೀವು ನನಗೆ ಅಲ್ಲಾಹನ ಹೆಸರಲ್ಲಿ ಪ್ರಮಾಣ ವಚನ ನೀಡುವ ತನಕ ನಾನು ಅವನನ್ನು ನಿಮ್ಮ ಸಂಗಡ ಸರ್ವಥಾ ಕಳುಹಿಸಿ ಕೊಡಲಾರೆ." ಅವರಿಗೆ (ಹ. ಯಅ್‌ಕೂಬರಿಗೆ) ಅವರೆಲ್ಲರೂ ತಮ್ಮ ತಮ್ಮ ಪ್ರಮಾಣವಚನ ಕೊಟ್ಟ ಬಳಿಕ ಅವರು (ಯಅ್‌ಕೂಬರು) ಹೇಳಿದರು, "ನಮ್ಮ ಈ ಪ್ರತಿಜ್ಞೆಯ ಮೇಲ್ನೋಟವಿರಿಸುವವನು ಅಲ್ಲಾಹ್."

قَالَ لَنْ أُرْسِلَهُۥ مَعَكُمْ حَتَّىٰ تُؤْتُونِ مَوْثِقًا
مِّنَ ٱللَّهِ لَتَأْتُنَّنِى بِهِۦٓ إِلَّآ أَن يُحَاطَ بِكُمْ ۖ
فَلَمَّآ ءَاتَوْهُ مَوْثِقَهُمْ قَالَ ٱللَّهُ عَلَىٰ مَا
نَقُولُ وَكِيلٌ ﴿٦٦﴾

67. ತರುವಾಯ ಅವರು ಹೇಳಿದರು, "ಓ ನನ್ನ ಮಕ್ಕಳೇ, ನೀವು ಈಜಿಪ್ಟ್‌ನ ರಾಜಧಾನಿಯೊಳಗೆ ಒಂದೇ ದ್ವಾರದಿಂದ ಪ್ರವೇಶಿಸ ಬಾರದು.[18] ಬೇರೆ ಬೇರೆ ದ್ವಾರಗಳಿಂದ ಪ್ರವೇಶಿಸಬೇಕು. ಆದರೆ ನಾನು ನಿಮ್ಮನ್ನು ಅಲ್ಲಾಹನ ವಿಧಿಯಿಂದ ತಪ್ಪಿಸಲಾರೆ. ಆಜ್ಞಾಧಿಕಾರವು ಅವನ ಹೊರತು ಇನ್ನಾರಿಗೂ ಇಲ್ಲ. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದೆ ಮತ್ತು ಯಾರು ಭರವಸೆಯನ್ನಿರಿಸುವುದಿದ್ದರೂ ಅವನ ಮೇಲೆಯೇ ಇರಿಸಲಿ."

وَقَالَ يَٰبَنِىَّ لَا تَدْخُلُوا۟ مِنۢ بَابٍ وَٰحِدٍ
وَٱدْخُلُوا۟ مِنْ أَبْوَٰبٍ مُّتَفَرِّقَةٍ ۖ وَمَآ
أُغْنِى عَنكُم مِّنَ ٱللَّهِ مِن شَىْءٍ ۖ إِنِ ٱلْحُكْمُ
إِلَّا لِلَّهِ ۖ عَلَيْهِ تَوَكَّلْتُ ۖ وَعَلَيْهِ فَلْيَتَوَكَّلِ
ٱلْمُتَوَكِّلُونَ ﴿٦٧﴾

68. ವಾಸ್ತವದಲ್ಲಿ ಆದುದೂ ಇದೇ. ಅವರು ತಮ್ಮ ತಂದೆಯ ಆದೇಶದಂತೆ (ಬೇರೆ ಬೇರೆ ದ್ವಾರಗಳಿಂದ) ನಗರದೊಳಗೆ ಪ್ರವೇಶಿಸಿದ್ದ ಈ ಜಾಗ್ರತಾ ಯತ್ನವು ಅಲ್ಲಾಹನ ವಿಧಿಯ ಮುಂದೆ ಏನೂ ಫಲಕಾರಿಯಾಗಲಿಲ್ಲ. ಯಅ್‌ಕೂಬರು ತಮ್ಮ ಮನಸ್ಸಿನಲ್ಲಿದ್ದ ಒಂದು ಅಂಜಿಕೆಯನ್ನು ದೂರೀಕರಿಸಿಕೊಳ್ಳಲಿಕ್ಕಾಗಿ ಅವರು ತಮ್ಮ ಪ್ರಯತ್ನ ಮಾಡಿಕೊಂಡರಷ್ಟೆ. ನಿಸ್ಸಂದೇಹ ವಾಗಿಯೂ ನಾವು ನೀಡಿದ ಶಿಕ್ಷಣದಿಂದ ಅವರು ಸುಶಿಕ್ಷಿತರಾಗಿಯೇ ಇದ್ದರು. ಆದರೆ ಹೆಚ್ಚಿನವರು ಪರಮಾರ್ಥವನ್ನು ತಿಳಿಯುವುದಿಲ್ಲ.

وَلَمَّا دَخَلُوا۟ مِنْ حَيْثُ أَمَرَهُمْ أَبُوهُم
مَّا كَانَ يُغْنِى عَنْهُم مِّنَ ٱللَّهِ مِن شَىْءٍ إِلَّا
حَاجَةً فِى نَفْسِ يَعْقُوبَ قَضَىٰهَا ۚ وَإِنَّهُۥ
لَذُو عِلْمٍ لِّمَا عَلَّمْنَٰهُ وَلَٰكِنَّ أَكْثَرَ
ٱلنَّاسِ لَا يَعْلَمُونَ ﴿٦٨﴾

69. ಇವರು ಯೂಸುಫರ ಸನ್ನಿಧಿಗೆ ತಲುಪಿದಾಗ ಅವರು ತಮ್ಮ ತಮ್ಮನನ್ನು ಒತ್ತಟ್ಟಿಗೆ ಕರೆದು, "(ಕಾಣೆಯಾಗಿದ್ದ) ನಿನ್ನ ಆ ಸಹೋದರನೇ ನಾನು. ಇನ್ನು ನೀನು ಇವರು ವರ್ತಿಸುತ್ತಿದ್ದುದರ ಬಗೆಗೆ ಚಿಂತಿಸಬೇಡ" ಎಂದರು.[19]

وَلَمَّا دَخَلُوا۟ عَلَىٰ يُوسُفَ ءَاوَىٰٓ إِلَيْهِ أَخَاهُ ۖ
قَالَ إِنِّىٓ أَنَا۠ أَخُوكَ فَلَا تَبْتَئِسْ بِمَا
كَانُوا۟ يَعْمَلُونَ ﴿٦٩﴾

18. ಬರಗಾಲದ ಈ ಸಂದರ್ಭದಲ್ಲಿ ಅವರು ಗುಂಪುಗಟ್ಟಿ ಈಜಿಪ್ಟ್‌ನೊಳಗೆ ಪ್ರವೇಶಿಸಿದರೆ ಅವರನ್ನು ಜನರು ಸಂಶಯದಿಂದ ನೋಡ ಬಹುದು. ಇವರು ದರೋಡೆ ಮಾಡಲಿಕ್ಕಾಗಿ ಬಂದವರೆಂದು ಶಂಕಿಸಬಹುದೆಂದು ಪ್ರಾಯಶಃ ಹ. ಯಅ್‌ಕೂಬ್(ಅ) ಭಾವಿಸಿರಬಹುದು.

19. ಪ್ರಾಯಶಃ ಈ ಭೇಟಿಯ ಸಂದರ್ಭದಲ್ಲಿ ಬಿನ್‌ಯಮೀನ್ ತಮ್ಮ ಮಲ ಸಹೋದರರು ಯಾವೆಲ್ಲಾ ಕೆಟ್ಟ ವರ್ತನೆ ತೋರಿದರು ಎಂಬುದನ್ನು ತಿಳಿಸಿರಬಹುದು. ಆಗ ಯೂಸುಫ್(ಅ) ತಮ್ಮ ಸಹೋದರನಿಗೆ "ಇನ್ನು ನೀನು ನನ್ನ ಬಳಿಯೇ ಇರುವೆ. ಆ ಅಕ್ರಮಿಗಳ ಕಪಿಮುಷ್ಟಿಯಲ್ಲಿರಲು ನಾನು ಮತ್ತೆ ನಿನ್ನನ್ನು ಕಳುಹಿಸಿ ಕೊಡಲಾರೆ" ಎಂದು ಸಾಂತ್ವನ ನೀಡಿರಬಹುದು. ಬಿನ್ ಯಮೀನ್‌ನನ್ನು

70. ಯೂಸುಫ್ ತಮ್ಮ ಸಹೋದರರ ಸಾಮಾನನ್ನು ಹೇರಿಸುತ್ತಿರುವಾಗ ತಮ್ಮ ತಮ್ಮನ ಸರಕಿನಲ್ಲಿ ಲೋಟೆಯನ್ನು ಇಟ್ಟು ಬಿಟ್ಟರು. ತರುವಾಯ ಕೂಗುವವನೊಬ್ಬನು, "ಓ ಯಾತ್ರಿಕ ತಂಡದವರೇ, ನೀವು ಕಳ್ಳರಾಗಿರುತ್ತೀರಿ" ಎಂದು ಕೂಗಿದನು.

فَلَمَّا جَهَّزَهُمْ بِجَهَازِهِمْ جَعَلَ السِّقَايَةَ فِيْ رَحْلِ اَخِيْهِ ثُمَّ اَذَّنَ مُؤَذِّنٌ اَيَّتُهَا الْعِيْرُ اِنَّكُمْ لَسٰرِقُوْنَ ﴿٧٠﴾

71. ಅವರು ತಿರುಗಿ, "ನಿಮ್ಮದೇನು ಕಳೆದುಹೋಗಿದೆ?" ಎಂದು ಕೇಳಿದರು.

قَالُوْا وَاَقْبَلُوْا عَلَيْهِمْ مَّاذَا تَفْقِدُوْنَ ﴿٧١﴾

72. ಆಗ ಸರಕಾರಿ ನೌಕರರು, "ರಾಜನ ಲೋಟೆಯು ಕಳೆದುಹೋಗಿದೆ" ಎಂದರು. (ಅವರ ನಾಯಕನು) "ಅದನ್ನು ತಂದು ಕೊಟ್ಟವನಿಗೆ ಒಂದು ಒಂಟೆ ಹೊರುವಷ್ಟು ಧಾನ್ಯ ಬಹುಮಾನವಿದೆ. ಇದಕ್ಕೆ ನಾನು ಹೊಣೆಗಾರನಾಗಿದ್ದೇನೆ" ಎಂದನು.

قَالُوْا نَفْقِدُ صُوَاعَ الْمَلِكِ وَلِمَنْ جَآءَ بِهٖ حِمْلُ بَعِيْرٍ وَّاَنَا بِهٖ زَعِيْمٌ ﴿٧٢﴾

73. ಆ ಸಹೋದರರು, "ಅಲ್ಲಾಹನಾಣೆ! ನಾವು ಈ ದೇಶದಲ್ಲಿ ಗೊಂದಲವನ್ನುಂಟು ಮಾಡಲು ಬಂದವರಲ್ಲವೆಂದೂ ನಾವು ಕಳ್ಳತನ ಮಾಡುವವರಲ್ಲವೆಂದೂ ನೀವು ಚೆನ್ನಾಗಿ ಬಲ್ಲಿರಿ" ಎಂದರು.

قَالُوْا تَاللّٰهِ لَقَدْ عَلِمْتُمْ مَّا جِئْنَا لِنُفْسِدَ فِي الْاَرْضِ وَمَا كُنَّا سٰرِقِيْنَ ﴿٧٣﴾

74. "ಸರಿ, ನೀವು ಸುಳ್ಳುಗಾರರಾದರೆ ಕಳ್ಳನಿಗೆ ಶಿಕ್ಷೆಯೇನು?" ಎಂದು ಅವರು ಕೇಳಿದರು.

قَالُوْا فَمَا جَزَآؤُهٗۤ اِنْ كُنْتُمْ كٰذِبِيْنَ ﴿٧٤﴾

75. ಅದಕ್ಕೆ ಅವರು, "ಅವನಿಗೆ ಶಿಕ್ಷೆಯೇ? ಯಾರ ಸರಕಿನೊಳಗಿಂದ ಅದು ಸಿಗುವುದೋ ಅವನೇ ಅದರ ಬದಲಿಗೆ ಇರಿಸಲ್ಪಡಬೇಕು. ನಮ್ಮಲ್ಲಿ ಇಂತಹ ಅಕ್ರಮಿಗಳಿಗೆ ಶಿಕ್ಷೆ ಕೊಡುವ ಕ್ರಮ ಇದುವೇ" ಎಂದು ಹೇಳಿದರು.

قَالُوْا جَزَآؤُهٗ مَنْ وُّجِدَ فِيْ رَحْلِهٖ فَهُوَ جَزَآؤُهٗ ؕ كَذٰلِكَ نَجْزِى الظّٰلِمِيْنَ ﴿٧٥﴾

76. ಆಗ ಯೂಸುಫ್ ತಮ್ಮ ಸಹೋದರನದಕ್ಕಿಂತ ಮುಂಚೆ ಅವರ ಚೀಲಗಳ ತಪಾಸಣೆ ನಡೆಸಲಾರಂಭಿಸಿದರು. ಆ ಬಳಿಕ ತನ್ನ ತಮ್ಮನ ಚೀಲದಿಂದ, ಕಾಣೆಯಾಗಿದ್ದುದನ್ನು ಹೊರ ತೆಗೆದರು. ಹೀಗೆ ನಾವು ನಮ್ಮ ಯುಕ್ತಿಯಿಂದ ಯೂಸುಫರನ್ನು ಸಮರ್ಥಿಸಿದೆವು. ಅಲ್ಲಾಹನೇ ಇಚ್ಛಿಸಿದ ವಿನಾ ರಾಜಧರ್ಮ (ಅರ್ಥಾತ್ ಈಜಿಪ್ಟ್‌ನ ರಾಜ ಶಾಸನದ) ಪ್ರಕಾರ ತನ್ನ

فَبَدَاَ بِاَوْعِيَتِهِمْ قَبْلَ وِعَآءِ اَخِيْهِ ثُمَّ اسْتَخْرَجَهَا مِنْ وِّعَآءِ اَخِيْهِ ؕ كَذٰلِكَ كِدْنَا لِيُوْسُفَ ؕ مَا كَانَ لِيَاْخُذَ اَخَاهُ فِيْ دِيْنِ الْمَلِكِ اِلَّاۤ اَنْ يَّشَآءَ اللّٰهُ ؕ نَرْفَعُ دَرَجٰتٍ

ಈಜಿಪ್ಟ್‌ನಲ್ಲೇ ಉಳಿಸಿಕೊಳ್ಳಲು ಯಾವ ಯೋಜನೆ ರೂಪಿಸುವುದು ಎಂಬ ಬಗ್ಗೆಯೂ ಈ ಇಬ್ಬರು ಸಹೋದರರ ನಡುವೆ ಅದೇ ಸಂದರ್ಭದಲ್ಲಿ ತೀರ್ಮಾನವಾಗಿರಬಹುದು. ಆ ಮೂಲಕ ಯೂಸುಫ್(ಅ) ವಿಷಯವನ್ನು ಯುಕ್ತಿಪೂರ್ವಕ ಗೋಪ್ಯವಾಗಿರಿಸಲು ಬಯಸಿದ್ದಕ್ಕೆ ಅನುಗುಣವಾದ ತೀರ್ಮಾನ ಆಗಿರಬಹುದು.

ತಮ್ಮನನ್ನು ಹಿಡಿಯುವುದು ಅವರಿಗೆ ಯೋಗ್ಯವಾಗಿರಲಿಲ್ಲ.[20] ನಾವು ನಮಗಿಷ್ಟ ಬಂದವರ ಸ್ಥಾನವನ್ನು ಉನ್ನತಗೊಳಿಸುತ್ತೇವೆ. ಸಕಲ ಜ್ಞಾನಿಗಳಿಗಿಂತ ಮೇಲಾಗಿರುವ ಓರ್ವ ಸರ್ವಜ್ಞನಿದ್ದಾನೆ.

مَنْ نَّشَآءُ ؕ وَفَوْقَ كُلِّ ذِیْ عِلْمٍ عَلِیْمٌ ﴿۷۶﴾

77. ಆ ಸಹೋದರರು ಹೇಳಿದರು, "ಈತನು ಕದ್ದರೆ ಆಶ್ಚರ್ಯವಿಲ್ಲ. ಇದಕ್ಕಿಂತ ಮುಂಚೆ ಇವನ ಅಣ್ಣನೂ (ಯೂಸುಫ್) ಕಳವು ಮಾಡಿದ್ದಾನೆ." ಯೂಸುಫ್, ಅವರ ಈ ಮಾತನ್ನು ನುಂಗಿಕೊಂಡರು. ನಿಜಸ್ಥಿತಿಯನ್ನೂ ಬಹಿರಂಗಗೊಳಿಸಲಿಲ್ಲ. "ಮಹಾ ನೀಚರು ನೀವು! (ನನ್ನ ಸಮ್ಮುಖದಲ್ಲೇ) ನೀವು ಹೊರಿಸುತ್ತಿರುವ ಅಪವಾದದ ನಿಜ ಸ್ಥಿತಿಯನ್ನು ಅಲ್ಲಾಹ್ ಚೆನ್ನಾಗಿ ಬಲ್ಲವನಾಗಿರುತ್ತಾನೆ" ಎಂದಿಷ್ಟೆ (ಸ್ವಗತ) ಹೇಳಿಕೊಂಡು ಸುಮ್ಮನಾದರು.

قَالُوْۤا اِنْ یَّسْرِقْ فَقَدْ سَرَقَ اَخٌ لَّهٗ مِنْ قَبْلُ ۚ فَاَسَرَّهَا یُوْسُفُ فِیْ نَفْسِهٖ وَلَمْ یُبْدِهَا لَهُمْ ۚ قَالَ اَنْتُمْ شَرٌّ مَّكَانًا ۚ وَاللّٰهُ اَعْلَمُ بِمَا تَصِفُوْنَ ﴿۷۷﴾

78. ಅವರು ಹೇಳಿದರು, "ಓ ಅಧಿಕಾರಿಯೇ, (ಅಝೀಝ್!)[21] ಇವನ ತಂದೆ ತುಂಬಾ ವಯೋವೃದ್ಧರು. ತಾವು ಇವನ ಸ್ಥಾನದಲ್ಲಿ ನಮ್ಮ ಪೈಕಿ ಯಾರನ್ನಾದರೂ ತಡೆದಿರಿಸಿಕೊಳ್ಳಿರಿ. ನಾವು ನಿಮ್ಮನ್ನು ಮಹಾ ಸಜ್ಜನರನ್ನಾಗಿ ಕಾಣುತ್ತೇವೆ."

قَالُوْا یٰۤاَیُّهَا الْعَزِیْزُ اِنَّ لَهٗۤ اَبًا شَیْخًا كَبِیْرًا فَخُذْ اَحَدَنَا مَكَانَهٗ ۚ اِنَّا نَرٰىكَ مِنَ الْمُحْسِنِیْنَ ﴿۷۸﴾

79. ಆಗ ಯೂಸುಫ್ ಹೇಳಿದರು, "ಶಾಂತಂ ಪಾಪಂ. ಇನ್ನೊಬ್ಬನನ್ನು ನಾವು ಇರಿಸಿಕೊಳ್ಳುವುದಾದರೂ ಹೇಗೆ? ನಾವು ನಮ್ಮ ಸೊತ್ತನ್ನು ಯಾರಲ್ಲಿ ಕಂಡೆವೋ[22] ಅವನನ್ನು ಬಿಟ್ಟು ಇನ್ನೊಬ್ಬನನ್ನು ಇರಿಸಿಕೊಂಡರೆ ನಾವು ಅಕ್ರಮಿಗಳಾಗುವೆವು."

قَالَ مَعَاذَ اللّٰهِ اَنْ نَّاْخُذَ اِلَّا مَنْ وَّجَدْنَا مَتَاعَنَا عِنْدَهٗۤ ۙ اِنَّاۤ اِذًا لَّظٰلِمُوْنَ ﴿۷۹﴾ ع

20. "ಯೂಸುಫ್(ಅ), ರಾಜನ ಕಾನೂನಿನ ಪ್ರಕಾರ ತಮ್ಮ ಸಹೋದರನನ್ನು ಹಿಡಿಯುವಂತಿರಲಿಲ್ಲ" ಎಂದು ಸಾಮಾನ್ಯವಾಗಿ ಇದನ್ನು ಭಾಷಾಂತರಿಸಲಾಗುತ್ತದೆ. ಆದರೆ ಹೀಗೆ ಇದನ್ನು ಅರ್ಥೈಸಿಕೊಳ್ಳುವುದಾದರೆ ವಿಷಯ ಅಸ್ಪಷ್ಟವಾಗಿ ಉಳಿಯುತ್ತದೆ. ರಾಜನ ಕಾನೂನಿನನ್ವಯ ಕಳ್ಳನನ್ನು ಹಿಡಿಯಲು ಸಾಧ್ಯವಾಗದೆ ಇರುವುದಾದರೂ ಹೇಗೆ? ಕಳ್ಳನನ್ನು ಹಿಡಿಯಲು ಅನುಮತಿ ಇಲ್ಲದಂತಹ ಕಾನೂನನ್ನು ಹೊಂದಿರುವ ಸಾಮ್ರಾಜ್ಯ ಜಗತ್ತಿನಲ್ಲಿ ಎಂದಾದರೂ ಅಸ್ತಿತ್ವದಲ್ಲಿತ್ತೇ? ಆದ್ದರಿಂದ ವಸ್ತುಸ್ಥಿತಿ ಯಾವುದೆಂದರೆ ಅಲ್ಲಾಹನ ಪ್ರವಾದಿಯಾಗಿರುತ್ತಾ ರಾಜನ ಕಾನೂನಿನನ್ವಯ ವರ್ತಿಸಲು ಹ. ಯೂಸುಫ್‌ರಿಗೆ(ಅ) ಸಾಧ್ಯವಿರಲಿಲ್ಲ. ಆದ್ದರಿಂದಲೇ ಹ. ಯೂಸುಫ್(ಅ) ತಮ್ಮ ಸಹೋದರರೊಡನೆ ಅವರ ಬಳಿಯ ಕಾನೂನಿನ ಬಗ್ಗೆ ಕೇಳಿದರು ಮತ್ತು ಪೂರ್ವ ಪ್ರವಾದಿ ಹ. ಇಬ್‌ರಾಹೀಮ್‌ರ(ಅ) ಶರೀಅತ್‌ನಂತೆ ತಮ್ಮ ಸಹೋದರನನ್ನು ಸೆರೆಹಿಡಿದರು.

21. ಇಲ್ಲಿ 'ಅಝೀಝ್' ಎಂಬ ಪದ ಹ.ಯೂಸುಫ್‌ರಿಗೆ(ಅ) ಪ್ರಯೋಗಿಸಲ್ಪಟ್ಟಿದೆ. ಕೇವಲ ಈ ಕಾರಣಕ್ಕಾಗಿಯೇ ವ್ಯಾಖ್ಯಾನಕಾರರು ಈ ಹಿಂದೆ ಝುಲೈಕಾಳ ಪತಿ ಹೊಂದಿದ್ದ ಪದವಿಯಲ್ಲಿ ಈಗ ಹ. ಯೂಸುಫ್(ಅ) ನೇಮಕಗೊಂಡಿದ್ದಾರೆ ಎಂದು ಭಾವಿಸಿದ್ದಾರೆ. ಆದರೆ ಟಿಪ್ಪಣಿ 9ರಲ್ಲಿ ನಾವು ಈ ಬಗ್ಗೆ ಸ್ಪಷ್ಟೀಕರಣ ನೀಡಿದ್ದೇವೆ. ಇದು ಈಜಿಪ್ಟಿನ ಯಾವುದೇ ನಿರ್ದಿಷ್ಟ ಪದವಿಯ ಹೆಸರಾಗಿರಲಿಲ್ಲ. ಬದಲಾಗಿ 'ಅಧಿಕಾರಾರೂಢ' ಎಂಬ ಅರ್ಥದಲ್ಲಿ ಈ ಪದ ಪ್ರಯೋಗಿಸಲ್ಪಡುತ್ತದೆ.

22. ಇಲ್ಲಿ 'ಕಳ್ಳ' ಎನ್ನುವ ಬದಲು "ನಾವು ನಮ್ಮ ಸೊತ್ತನ್ನು ಯಾರಲ್ಲಿ ಕಂಡೆವೋ" ಎನ್ನುವ ಎಚ್ಚರಿಕೆಯನ್ನು ಪಾಲಿಸಲಾಗಿರುವುದು ಗಮನಾರ್ಹ. ಇದನ್ನೇ ಶರೀಅತ್‌ನ ಪಾರಿಭಾಷಿಕದಲ್ಲಿ 'ತೌರಿಯಃ' ಎನ್ನಲಾಗುತ್ತದೆ. ಅರ್ಥಾತ್ 'ವಾಸ್ತವಿಕತೆಯನ್ನು ಮರೆಸುವುದು' ಅಥವಾ ವಸ್ತುಸ್ಥಿತಿಯನ್ನು ಗೋಪ್ಯವಾಗಿರಿಸುವುದು. ಯಾವುದಾದರೂ ಶೋಷಿತನನ್ನು ಶೋಷಕನಿಂದ ರಕ್ಷಿಸಲು ಅಥವಾ ಯಾವುದಾದರೂ ದೊಡ್ಡ

80. ಹೀಗೆ ಯೂಸುಫರಿಂದ ನಿರಾಶರಾದ ಮೇಲೆ ಅವರು ಒತ್ತಟ್ಟಿಗೆ ಹೋಗಿ ಪರಸ್ಪರ ಸಮಾಲೋಚನೆ ನಡೆಸತೊಡಗಿದರು. ಅವರಲ್ಲಿ ಎಲ್ಲರಿಗೂ ಹಿರಿಯನಾಗಿದ್ದವನು ಹೇಳಿದನು, "ನಿಮ್ಮ ತಂದೆ ನಿಮ್ಮೊಡನೆ ಅಲ್ಲಾಹನ ಹೆಸರಲ್ಲಿ ಪ್ರಮಾಣ ವಚನ ಪಡೆದಿರುವುದು ನಿಮಗೆ ತಿಳಿದಿಲ್ಲವೇ? ಇದಕ್ಕೆ ಮುಂಚೆ ಯೂಸುಫನ ವಿಷಯದಲ್ಲಿ ನೀವು ಮಾಡಿರುವುದೆಲ್ಲವೂ ನಿಮಗೆ ತಿಳಿದಿದೆ. ಇನ್ನು ನನ್ನ ತಂದೆಯವರು ನನಗೆ ಅನುಮತಿ ಕೊಡುವ ವರೆಗೆ ಅಥವಾ ಅಲ್ಲಾಹನೇ ನನ್ನ ಬಗ್ಗೆ ತೀರ್ಮಾನ ಮಾಡುವ ವರೆಗೆ ನಾನು ಇಲ್ಲಿಂದ ಎಷ್ಟು ಮಾತ್ರಕ್ಕೂ ಹೋಗಲಾರೆ. ಅಲ್ಲಾಹನು ಅತ್ಯುತ್ತಮ ತೀರ್ಪುಗಾರನು.

فَلَمَّا اسْتَيْـَٔسُوْا مِنْهُ خَلَصُوْا نَجِيًّا ؕ قَالَ كَبِيْرُهُمْ اَلَمْ تَعْلَمُوْٓا اَنَّ اَبَاكُمْ قَدْ اَخَذَ عَلَيْكُمْ مَّوْثِقًا مِّنَ اللّٰهِ وَ مِنْ قَبْلُ مَا فَرَّطْتُّمْ فِیْ يُوْسُفَ ۚ فَلَنْ اَبْرَحَ الْاَرْضَ حَتّٰی يَاْذَنَ لِیْۤ اَبِیْۤ اَوْ يَحْكُمَ اللّٰهُ لِیْ ۚ وَهُوَ خَيْرُ الْحٰكِمِيْنَ ﴿۸۰﴾

81. ನೀವು ಮರಳಿ ಹೋಗಿ ತಂದೆಯವರೊಡನೆ, ಅಪ್ಪಾ, ನಿಮ್ಮ ಮಗನು ಕಳವು ಮಾಡಿದ್ದಾನೆ. ಅವನು ಕಳವು ಮಾಡುತ್ತಿರುವುದನ್ನು ನಾವು ನೋಡಲಿಲ್ಲ. ನಮಗೆ ತಿಳಿದುದನ್ನು ಮಾತ್ರ ನಾವು ಹೇಳುತ್ತೇವೆ. ಅದೃಶ್ಯವಾಗಿರುವುದರ ಬಗ್ಗೆ ಮೇಲ್ನೋಟವಹಿಸಲು ನಮ್ಮಿಂದ ಸಾಧ್ಯವಿರಲಿಲ್ಲ.

اِرْجِعُوْۤا اِلٰۤی اَبِيْكُمْ فَقُوْلُوْا يٰۤاَبَانَاۤ اِنَّ ابْنَكَ سَرَقَ ۚ وَمَا شَهِدْنَاۤ اِلَّا بِمَا عَلِمْنَا وَمَا كُنَّا لِلْغَيْبِ حٰفِظِيْنَ ﴿۸۱﴾

82. ತಾವು ನಾವಿದ್ದ ನಾಡಿನ ಜನರೊಡನೆಯೂ ನಾವು ಯಾವ ಯಾತ್ರಾ ತಂಡದೊಂದಿಗೆ ಬಂದಿದ್ದೇವೋ ಅವರೊಡನೆಯೂ ಕೇಳಿಕೊಳ್ಳಿರಿ. ನಾವು ಸಂಪೂರ್ಣ ಸತ್ಯವಾದಿಗಳು ಎಂದು ಹೇಳಿರಿ" ಎಂದನು.

وَسْـَٔلِ الْقَرْيَةَ الَّتِیْ كُنَّا فِيْهَا وَالْعِيْرَ الَّتِیْۤ اَقْبَلْنَا فِيْهَا ؕ وَاِنَّا لَصٰدِقُوْنَ ﴿۸۲﴾

83. ಈ ವೃತ್ತಾಂತವನ್ನು ಕೇಳಿ ತಂದೆಯು, "ವಾಸ್ತವದಲ್ಲಿ ನಿಮ್ಮ ಭ್ರಷ್ಟಚಿತ್ತವು ನಿಮಗೆ ಇನ್ನೊಂದು ದೊಡ್ಡ ವಿಷಯವನ್ನು

قَالَ بَلْ سَوَّلَتْ لَكُمْ اَنْفُسُكُمْ اَمْرًا ؕ فَصَبْرٌ

ಅಕ್ರಮವನ್ನು ತಡೆಯಲು ವಾಸ್ತವಿಕತೆಗೆ ವಿರುದ್ಧವಾದ ಮಾತನ್ನು ಹೇಳುವುದು ಅಥವಾ ಸತ್ಯಕ್ಕೆ ದೂರವಾದ ನೆಪ ಹುಡುಕುವುದರ ವಿನಾ ಬೇರಾವುದೇ ದಾರಿಯಿಲ್ಲದ ಸಂದರ್ಭದಲ್ಲಿ - ಸತ್ಯಸಂಧನಾದ ಓರ್ವ ವ್ಯಕ್ತಿ ಸುಳ್ಳಾಡುವುದರಿಂದ ದೂರವಿರುತ್ತಾ ವಾಸ್ತವಿಕತೆಯನ್ನು ಗೋಪ್ಯವಾಗಿಟ್ಟು ಕೇಡನ್ನು ಎದುರಿಸಲಿಕ್ಕಾಗಿ ಯಾವುದಾದರೂ ಮಾತನ್ನು ಹೇಳುವುದು ಅಥವಾ ಯಾವುದಾದರೂ ಯುಕ್ತಿಯನ್ನು ಪಾಲಿಸಲು ಪ್ರಯತ್ನಿಸುವುದು. ಪ್ರಸ್ತುತ ಸಂದರ್ಭದಲ್ಲಿ ಹ. ಯೂಸುಫ್(ಅ) ಯಾವ ರೀತಿ ಧರ್ಮ ಸಮ್ಮತವಾದ 'ತೌರಿಯ:'ದ ಶರತ್ತುಗಳನ್ನು ಸಾದ್ಯಂತ ಈಡೇರಿಸಿದ್ದಾರೆ ಎಂಬುದು ಗಮನಾರ್ಹ. ಸಹೋದರನ ಒಪ್ಪಿಗೆ ಪಡೆದು ಅವನ ಸರಕಿನಲ್ಲಿ ಲೋಟೆಯನ್ನಿರಿಸಿದರು. ಆದರೆ ನೌಕರರಿಗೆ ಅವನ ಮೇಲೆ ಕಳ್ಳತನದ ಆರೋಪ ಹೊರಿಸುವಂತೆ ಹೇಳಲಿಲ್ಲ. ಅನಂತರ ಸರ್ಕಾರಿ ನೌಕರರು ಕಳ್ಳತನದ ಆರೋಪದಲ್ಲಿ ಅವರನ್ನು ಹಿಡಿದು ತಂದಾಗ ಸಾವಧಾನದಿಂದ ಅವರ ಶೋಧನೆ ನಡೆಸಲಾಯಿತು. ಅನಂತರ ಸಹೋದರರು, "ಬಿನ್ ಯಮೀನ್‌ನ ಬದಲಿಗೆ ನಮ್ಮಲ್ಲಿ ಯಾರನ್ನಾದರೂ ಇಟ್ಟುಕೊಳ್ಳಿರಿ" ಎಂದು ಹೇಳಿದಾಗ ಅದಕ್ಕುತ್ತರವಾಗಿ ಅವರ ಮಾತಿನ ಮೂಲಕವೇ ಅವರಿಗೆ ಎದಿರೇಟು ನೀಡಲಾಯಿತು, "ಯಾರ ಸರಕಿನಿಂದ ಸೊತ್ತು ಹೊರಬರುತ್ತದೋ ಅವನನ್ನು ಇರಿಸಿಕೊಳ್ಳಬೇಕೆಂಬುದು ನಿಮ್ಮ ತೀರ್ಮಾನವೇ ಆಗಿತ್ತು. ನಿಮ್ಮೆದುರಿನಲ್ಲೇ ಬಿನ್‌ಯಮೀನ್‌ನ ಸರಕಿನಿಂದ ನಮ್ಮ ಸೊತ್ತು ಹೊರಬಂದಿದೆ. ಆದ್ದರಿಂದ ನಾವು ಇವನನ್ನೇ ಇರಿಸಿಕೊಳ್ಳುತ್ತೇವೆ. ಇನ್ನೊಬ್ಬನನ್ನು ಅವನ ಬದಲಿಗೆ ಇರಿಸಿಕೊಳ್ಳಲು ಹೇಗೆ ಸಾಧ್ಯ?" ಎಂದು ಹೇಳಲಾಯಿತು.

ಸುಲಭಗೊಳಿಸಿಬಿಟ್ಟಿತು.[23] ಚಿಂತಿಲ್ಲ; ಇದನ್ನೂ ತಾಳಿಕೊಳ್ಳುವೆನು; ಚೆನ್ನಾಗಿ ತಾಳಿಕೊಳ್ಳುವೆನು. ಅಲ್ಲಾಹನು ಅವರೆಲ್ಲರನ್ನೂ ತಂದು ನನ್ನೊಂದಿಗೆ ಸೇರಿಸಿಬಿಡಲೂ ಬಹುದು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನಾಗಿದ್ದು ಅವನ ಎಲ್ಲಾ ಕಾರ್ಯಗಳೂ ಯುಕ್ತಿಪೂರ್ಣವಾಗಿರುತ್ತವೆ" ಎಂದು ಹೇಳಿದರು.

جَمِيْلٌ ؕ عَسَى اللّٰهُ اَنْ يَّاْتِيَنِيْ بِهِمْ جَمِيْعًا ؕ
اِنَّهٗ هُوَ الْعَلِيْمُ الْحَكِيْمُ ﴿۸۳﴾

84. ಅನಂತರ ಅವರು (ಯಅ್‌ಕೂಬರು) ಅವರಿಂದ ಮುಖ ತಿರುಗಿಸಿ ಕುಳಿತರು ಮತ್ತು 'ಹಾ! ಯೂಸುಫ್!' ಎಂದು ಪ್ರಲಾಪಿಸತೊಡಗಿದರು. ಅವರು ಒಳಗಿಂದೊಳಗೆ ಶೋಕಾತಿರೇಕದಿಂದ ಏದುಸಿರು ಬಿಡುತ್ತಿದ್ದರು ಮತ್ತು ಅವರ ಕಣ್ಣುಗಳು ಬಿಳುಪೇರಿ ಬಿಟ್ಟಿದ್ದುವು.

وَتَوَلّٰى عَنْهُمْ وَقَالَ يٰۤاَسَفٰى عَلٰى يُوْسُفَ
وَابْيَضَّتْ عَيْنٰهُ مِنَ الْحُزْنِ فَهُوَ كَظِيْمٌ ﴿۸۴﴾

85. ಪುತ್ರರು ಹೇಳಿದರು, "ಅಲ್ಲಾಹನಾಣೆ! ತಾವಂತು ಯೂಸುಫನನ್ನೇ ನೆನೆಸುತ್ತ ಅವನ ದುಃಖದಲ್ಲಿ ತಮ್ಮನ್ನು ತಾವೇ ಕರಗಿಸಿಬಿಡುವಿರಿ ಅಥವಾ ತಮ್ಮ ಜೀವವನ್ನೇ ನಾಶಗೊಳಿಸಿಕೊಳ್ಳುವಿರಿ."

قَالُوْا تَاللّٰهِ تَفْتَؤُا تَذْكُرُ يُوْسُفَ حَتّٰى تَكُوْنَ
حَرَضًا اَوْ تَكُوْنَ مِنَ الْهٰلِكِيْنَ ﴿۸۵﴾

86. ಅವರು ಹೀಗೆ ಹೇಳಿದರು: "ನಾನು ನನ್ನ ತಲ್ಲಣ ಮತ್ತು ದುಃಖದ ಮೊರೆಯನ್ನು ಅಲ್ಲಾಹನ ಹೊರತು ಇನ್ನಾರೊಡನೆಯೂ ಇಡುವುದಿಲ್ಲ. ಅಲ್ಲಾಹನನ್ನು ನಾನು ತಿಳಿದುಕೊಂಡಂತೆ ನೀವು ತಿಳಿದಿಲ್ಲ.

قَالَ اِنَّمَاۤ اَشْكُوْا بَثِّيْ وَحُزْنِيْۤ اِلَى اللّٰهِ
وَاَعْلَمُ مِنَ اللّٰهِ مَا لَا تَعْلَمُوْنَ ﴿۸۶﴾

87. ಓ ನನ್ನ ಮಕ್ಕಳೇ, ನೀವು ಹೋಗಿ ಯೂಸುಫನನ್ನೂ ಅವನ ತಮ್ಮನನ್ನೂ ಪತ್ತೆಹಚ್ಚಿರಿ. ಅಲ್ಲಾಹನ ಅನುಗ್ರಹದಿಂದ ನಿರಾಶರಾಗಬೇಡಿರಿ. ಅವನ ಅನುಗ್ರಹದಿಂದ ಸತ್ಯನಿಷೇಧಿಗಳು ಮಾತ್ರ ನಿರಾಶರಾಗುತ್ತಾರೆ."

يٰبَنِيَّ اذْهَبُوْا فَتَحَسَّسُوْا مِنْ يُّوْسُفَ وَاَخِيْهِ
وَلَا تَايْـَٔسُوْا مِنْ رَّوْحِ اللّٰهِ ؕ اِنَّهٗ لَا يَايْـَٔسُ
مِنْ رَّوْحِ اللّٰهِ اِلَّا الْقَوْمُ الْكٰفِرُوْنَ ﴿۸۷﴾

88. ಇವರು ಈಜಿಪ್ಟ್‌ಗೆ ಹೋಗಿ ಯೂಸುಫರ ಮುಂದೆ ಹಾಜರಾದಾಗ ಇವರು ಹೀಗೆ ಭಿನ್ನವಿಸಿದರು, "ಓ ಮಹಾನುಭಾವರೇ, ನಾವು ಮತ್ತು ನಮ್ಮ ಮಕ್ಕಳು ಮರಿಗಳು ಮಹಾ ಗಂಡಾಂತರದಲ್ಲಿ ಸಿಲುಕಿದ್ದೇವೆ. ನಾವು ಅತ್ಯಲ್ಪ ಬಂಡವಾಳ ತಂದಿದ್ದೇವೆ. ತಾವು

فَلَمَّا دَخَلُوْا عَلَيْهِ قَالُوْا يٰۤاَيُّهَا الْعَزِيْزُ
مَسَّنَا وَاَهْلَنَا الضُّرُّ وَجِئْنَا بِبِضَاعَةٍ
مُّزْجٰىةٍ فَاَوْفِ لَنَا الْكَيْلَ وَتَصَدَّقْ

23. ಅರ್ಥಾತ್- ನಾನು ನನ್ನ ಮಗನ ಸಚ್ಚಾರಿತ್ರ್ಯದ ಬಗ್ಗೆ ಚೆನ್ನಾಗಿ ಬಲ್ಲೆ. ಆದರೆ ನನ್ನ ಮಗ ಒಂದು ಲೋಟೆಯನ್ನು ಕದಿಯುವ ಅಪರಾಧವೆಸಗಬಹುದು ಎಂದು ಭಾವಿಸುವುದು ನಿಮ್ಮ ಪಾಲಿಗೆ ಸುಲಭವಾಗಿದೆ. ಇದಕ್ಕೆ ಮೊದಲು ನಿಮ್ಮೋರ್ವ ಸಹೋದರನನ್ನು ಬೇಕಂತಲೇ ಕಾಣೆಯಾಗಿಸುವುದು ಮತ್ತು ಅವನ ಅಂಗಿಗೆ ಯಾವುದೋ ರಕ್ತವನ್ನು ತಾಗಿಸಿಕೊಂಡು ಬರುವುದು ನಿಮ್ಮ ಪಾಲಿಗೆ ಸುಲಭದ ಕೆಲಸವಾಗಿತ್ತು. ಈಗ ಮತ್ತೋರ್ವ ಸಹೋದರನನ್ನು ಕಳ್ಳನೆಂದು ಸಮ್ಮತಿಸಿ ಆ ಬಗ್ಗೆ ನನಗೆ ಸುದ್ದಿ ಮುಟ್ಟಿಸುವುದೂ ನಿಮ್ಮ ಪಾಲಿಗೆ ಸುಲಭವಾಗಿದೆ.

ನಮಗೆ ಹೇರಳ ಧಾನ್ಯ ನೀಡಿರಿ ಮತ್ತು ನಮಗೆ ದಾನ ಮಾಡಿರಿ. ಅಲ್ಲಾಹನು ದಾನ ಮಾಡುವವರಿಗೆ ಪ್ರತಿಫಲ ನೀಡುತ್ತಾನೆ."

عَلَيْنَا ۖ إِنَّ اللَّهَ يَجْزِي الْمُتَصَدِّقِينَ ﴿٨٨﴾

89. (ಇದನ್ನು ಕೇಳಿ ಯೂಸುಫರಿಗೆ ಸಹಿಸಲಾಗಲಿಲ್ಲ) ಅವರು (ಹೀಗೆ) ಹೇಳಿದರು: "ನೀವು ಅಜ್ಞಾನಿಗಳಾಗಿದ್ದಾಗ ಯೂಸುಫ್ ಮತ್ತು ಅವನ ತಮ್ಮನ ವಿಷಯದಲ್ಲಿ ಹೇಗೆ ವರ್ತಿಸಿದ್ದಿರೆಂದೂ ನಿಮಗೆ ತಿಳಿದಿದೆಯೇ?"

قَالَ هَلْ عَلِمْتُمْ مَا فَعَلْتُمْ بِيُوسُفَ
وَأَخِيهِ إِذْ أَنْتُمْ جَاهِلُونَ ﴿٨٩﴾

90. (ಅವರು ಬೆರಗಾಗಿ ಕೇಳಿದರು) "ಏನು? ನೀವು ಯೂಸುಫರೇ?" (ಆಗ) ಅವರು, "ಅಹುದು, ನಾನು ಯೂಸುಫ್ ಮತ್ತು ಇವನು ನನ್ನ ತಮ್ಮ. ಅಲ್ಲಾಹನು ನಮ್ಮ ಮೇಲೆ ಅನುಗ್ರಹ ತೋರಿದ್ದಾನೆ. ವಾಸ್ತವದಲ್ಲಿ ಭಯಭಕ್ತಿಯೊಂದಿಗೂ ಸಹನೆಯೊಂದಿಗೂ ಕಾರ್ಯವೆಸಗಿದರೆ ಅಲ್ಲಾಹನ ಬಳಿ ಇಂತಹ ಸಜ್ಜನರ ಪ್ರತಿಫಲ ವ್ಯರ್ಥಗೊಳ್ಳುವುದಿಲ್ಲ" ಎಂದರು.

قَالُوا أَإِنَّكَ لَأَنْتَ يُوسُفُ ۖ قَالَ أَنَا
يُوسُفُ وَهَٰذَا أَخِي ۖ قَدْ مَنَّ اللَّهُ عَلَيْنَا ۖ
إِنَّهُ مَنْ يَتَّقِ وَيَصْبِرْ فَإِنَّ اللَّهَ لَا
يُضِيعُ أَجْرَ الْمُحْسِنِينَ ﴿٩٠﴾

91. ಅವರು (ಹೀಗೆ) ಹೇಳಿದರು, "ಅಲ್ಲಾಹನಾಣೆ! ನಿಮಗೆ ಅಲ್ಲಾಹನು ನಮ್ಮ ಮೇಲೆ ಶ್ರೇಷ್ಠತೆ ದಯಪಾಲಿಸಿದ್ದಾನೆ. ನಿಜಕ್ಕೂ ನಾವು ಅಪರಾಧಿಗಳಾಗಿದ್ದೆವು."

قَالُوا تَاللَّهِ لَقَدْ آثَرَكَ اللَّهُ عَلَيْنَا وَ
إِنْ كُنَّا لَخَاطِئِينَ ﴿٩١﴾

92. ಆಗ ಅವರು, "ಇಂದು ನಿಮ್ಮ ಮೇಲೆ ಯಾವ ದೋಷಾರೋಪಣೆಯೂ ಇಲ್ಲ. ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ಅವನು ಎಲ್ಲರಿಗಿಂತಲೂ ಮಿಗಿಲಾದ ದಯಾಮಯನಾಗಿರುತ್ತಾನೆ.

قَالَ لَا تَثْرِيبَ عَلَيْكُمُ الْيَوْمَ ۖ يَغْفِرُ اللَّهُ
لَكُمْ ۖ وَهُوَ أَرْحَمُ الرَّاحِمِينَ ﴿٩٢﴾

93. ಹೋಗಿರಿ, ನನ್ನ ಈ ಅಂಗಿಯನ್ನು ಕೊಂಡು ಹೋಗಿರಿ ಮತ್ತು ನನ್ನ ತಂದೆಯವರ ಮುಖದ ಮೇಲೆ ಹಾಕಿಬಿಡಿರಿ. ಅವರ ದೃಷ್ಟಿ ಮರಳಿ ಬರುವುದು ಮತ್ತು ನಿಮ್ಮ ಕುಟುಂಬದವರನ್ನೆಲ್ಲ ನನ್ನ ಬಳಿಗೆ ಕರೆತನ್ನಿರಿ" ಎಂದರು.

اذْهَبُوا بِقَمِيصِي هَٰذَا فَأَلْقُوهُ عَلَىٰ وَجْهِ
أَبِي يَأْتِ بَصِيرًا وَأْتُونِي بِأَهْلِكُمْ
أَجْمَعِينَ ﴿٩٣﴾

94. ಈ ಕಾರವಾನವು (ಈಜಿಪ್ಟ್‌ನಿಂದ ಹೊರಟಾಗ) ಅವರ ತಂದೆಯು (ಕನ್‌ಆನ್‌ನಲ್ಲಿ ಹೀಗೆ) ಹೇಳಿದರು: "ನಾನು ಯೂಸುಫನ ಸುವಾಸನೆಯನ್ನು ಪಡೆಯುತ್ತಿದ್ದೇನೆ. ನೀವು ನನಗೆ ಮುದಿಭ್ರಾಂತಿಯುಂಟಾಗಿದೆ ಎಂದೇನೂ ಹೇಳಬೇಡಿರಿ."

وَلَمَّا فَصَلَتِ الْعِيرُ قَالَ أَبُوهُمْ إِنِّي لَأَجِدُ
رِيحَ يُوسُفَ ۖ لَوْلَا أَنْ تُفَنِّدُونِ ﴿٩٤﴾

95. ಆಗ ಮನೆಯವರು, "ಅಲ್ಲಾಹನಾಣೆ ನೀವಿನ್ನೂ ಅದೇ ಹಳೆಯ ಭ್ರಮೆಯಲ್ಲೇ ಬಿದ್ದಿರುವಿರಿ" ಎಂದರು.

قَالُوا تَاللَّهِ إِنَّكَ لَفِي ضَلَالِكَ الْقَدِيمِ ﴿٩٥﴾

96. ತರುವಾಯ ಸುವಾರ್ತೆ ತರುವವನು ಬಂದಾಗ ಅವನು ಯೂಸುಫರ ಅಂಗಿಯನ್ನು ಯಅ್‌ಕೂಬರ ಮುಖದ ಮೇಲೆ ಹಾಕಿದನು ಮತ್ತು ಒಮ್ಮೆಲೆ ಅವರ ದೃಷ್ಟಿ ಮರಳಿ ಬಂತು. ಆಗ ಅವರು ಹೇಳಿದರು, "ನಾನು ಮೊದಲೇ ಹೇಳುತ್ತಿರಲಿಲ್ಲವೇ? ನಾನು ಅಲ್ಲಾಹನ ಕಡೆಯಿಂದ ನಿಮಗೆ ತಿಳಿಯದುದನ್ನು ತಿಳಿಯುತ್ತೇನೆ."

فَلَمَّآ أَنْ جَآءَ الْبَشِيرُ أَلْقٰهُ عَلٰى وَجْهِهٖ
فَارْتَدَّ بَصِيرًا ۚ قَالَ أَلَمْ أَقُلْ لَّكُمْ ۚ
إِنِّىٓ أَعْلَمُ مِنَ اللّٰهِ مَا لَا تَعْلَمُونَ ﴿٩٦﴾

97. ಆಗ ಎಲ್ಲರೂ ಒಕ್ಕೊರಳಿನಿಂದ, "ಅಪ್ಪಾ, ತಾವು ನಮ್ಮ ಅಪರಾಧಗಳಿಗಾಗಿ ಕ್ಷಮೆ ಯಾಚಿಸಿರಿ. ನಿಜಕ್ಕೂ ನಾವು ಅಪರಾಧಿಗಳಾಗಿದ್ದೆವು" ಎಂದರು.

قَالُوا يٰٓأَبَانَا اسْتَغْفِرْ لَنَا ذُنُوبَنَآ إِنَّا
كُنَّا خٰطِئِينَ ﴿٩٧﴾

98. ಆಗ ಅವರು, "ನಾನು ನನ್ನ ಪ್ರಭುವಿನೊಡನೆ ನಿಮ್ಮನ್ನು ಕ್ಷಮಿಸಲಿಕ್ಕಾಗಿ ಪ್ರಾರ್ಥಿಸುವೆನು. ಅವನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ" ಎಂದರು.

قَالَ سَوْفَ أَسْتَغْفِرُ لَكُمْ رَبِّىٓ ۗ إِنَّهٗ
هُوَ الْغَفُورُ الرَّحِيمُ ﴿٩٨﴾

99. ಅನಂತರ ಇವರು ಯೂಸುಫರ ಬಳಿಗೆ ತಲಪಿದಾಗ ಅವರು ತಮ್ಮ ಮಾತಾಪಿತರನ್ನು ತನ್ನೊಂದಿಗೆ ಇರಿಸಿಕೊಂಡರು ಮತ್ತು (ತಮ್ಮ ಎಲ್ಲಾ ಕುಟುಂಬದವರೊಡನೆ) "ನೀವೆಲ್ಲರೂ ನಗರದೊಳಕ್ಕೆ ಪ್ರವೇಶಿಸಿರಿ. ಅಲ್ಲಾಹನಿಚ್ಛಿಸಿದರೆ ಇಲ್ಲಿ ಶಾಂತಿ ಸಮಾಧಾನಗಳೊಂದಿಗೆ ವಾಸಿಸುವಿರಿ" ಎಂದರು.

فَلَمَّا دَخَلُوا عَلٰى يُوسُفَ اٰوٰىٓ إِلَيْهِ
أَبَوَيْهِ وَقَالَ ادْخُلُوا مِصْرَ إِنْ شَآءَ
اللّٰهُ اٰمِنِينَ ﴿٩٩﴾

100. (ನಗರದೊಳಗೆ ಪ್ರವೇಶಿಸಿದ ತರುವಾಯ) ಅವರು ತಮ್ಮ ಮಾತಾಪಿತರನ್ನೆತ್ತಿ ತಮ್ಮ ಬಳಿ ಆಸನದಲ್ಲಿ ಕುಳ್ಳಿರಿಸಿಕೊಂಡರು ಮತ್ತು ಎಲ್ಲರೂ ಅವರ ಮುಂದೆ ಸಜ್ದಃ ಮಾಡಿದರು.[24] ಆಗ ಯೂಸುಫ್ ಇಂತೆಂದರು: "ಅಪ್ಪಾ, ನಾನು ಹಿಂದೆ ಕಂಡಿದ್ದ ಸ್ವಪ್ನದ ಫಲ ಇದಾಗಿರುತ್ತದೆ. ನನ್ನ ಪ್ರಭು ಅದನ್ನು ಸತ್ಯಗೊಳಿಸಿ

وَرَفَعَ أَبَوَيْهِ عَلَى الْعَرْشِ وَخَرُّوا لَهٗ
سُجَّدًا ۚ وَقَالَ يٰٓأَبَتِ هٰذَا تَأْوِيلُ
رُءْيَايَ مِنْ قَبْلُ ۫ قَدْ جَعَلَهَا رَبِّى
حَقًّا ۗ وَقَدْ أَحْسَنَ بِىٓ إِذْ أَخْرَجَنِى مِنَ

24. ಈ 'ಸಾಷ್ಟಾಂಗ' (ಸಜ್ದಃ) ಎಂಬ ಪದದಿಂದ ಅನೇಕರು ತಪ್ಪುಕಲ್ಪನೆಗೆ ಒಳಗಾಗಿದ್ದಾರೆ. ಎಲ್ಲಿಯವರೆಗೆಂದರೆ ಇದನ್ನೇ ಆಧಾರವಾಗಿರಿಸಿ ರಾಜರುಗಳ ಮತ್ತು ಪೀರ್‌ಗಳ ಮುಂದೆ ವಂದನಾ ಸಾಷ್ಟಾಂಗ ಮತ್ತು ಗೌರವಸಾಷ್ಟಾಂಗ ಮಾಡುವ ಅವಕಾಶವನ್ನೂ ಒಂದು ವಿಭಾಗ ಹುಡುಕಿ ತೆಗೆದಿದೆ. ಇನ್ನು ಕೆಲವರು ಈ ಅರೋಚಕ ವಿಷಯದಿಂದ ನುಣುಚಿಕೊಳ್ಳಲಿಕ್ಕಾಗಿ ಅದನ್ನು ಹೀಗೆ ವಿವರಿಸಿದರು. ಹಿಂದಿನ ಶರೀಅತ್‌ನಲ್ಲಿ ಅಲ್ಲಾಹೇತರರಿಗೆ ಸಾಷ್ಟಾಂಗವೆರಗುವುದು ಮಾತ್ರ ನಿಷಿದ್ಧವಾಗಿತ್ತು. ಆರಾಧನಾ ಭಾವನೆಯಿಂದ ಮುಕ್ತವಾದ ಸಾಷ್ಟಾಂಗವನ್ನು ಇತರರಿಗೂ ಮಾಡಬಹುದಾಗಿತ್ತು. ಆದರೆ ಮುಹಮ್ಮದ್‌ರ(ಸ) ಮೂಲಕ ಬಂದ ಶರೀಅತ್‌ನಲ್ಲಿ ಎಲ್ಲಾ ವಿಧದ ಸಾಷ್ಟಾಂಗವನ್ನು ಅಲ್ಲಾಹೇತರರಿಗೆ ನಿಷಿದ್ಧಗೊಳಿಸಲಾಯಿತು. 'ಸಜ್ದಃ' ಎಂಬ ಪದವನ್ನು ಆಧುನಿಕ ಪಾರಿಭಾಷಿಕದ ಆಧಾರದಲ್ಲಿ ಅರ್ಥೈಸಲಾಗಿರುವುದೇ ವಾಸ್ತವದಲ್ಲಿ ಈ ಎಲ್ಲಾ ತಪ್ಪುಕಲ್ಪನೆಗಳಿಗೂ ಕಾರಣವಾಗಿದೆ. ಅರ್ಥಾತ್ ಕೈ, ಮೊಣಕಾಲು ಮತ್ತು ಹಣೆಯನ್ನು ನೆಲಕ್ಕೆ ತಾಗಿಸುವುದು. ವಾಸ್ತವದಲ್ಲಿ 'ಸಜ್ದಃ'ದ ಮೂಲಾರ್ಥ ಬಾಗುವುದು ಎಂದು ಮಾತ್ರವಾಗಿದೆ. ಇಲ್ಲಿಯೂ ಇದೇ ಅರ್ಥದಲ್ಲಿ ಈ ಪದ ಪ್ರಯೋಗವಾಗಿದೆ.

ಬಿಟ್ಟನು. ನನ್ನನ್ನು ಸೆರೆಮನೆಯಿಂದ ಬಿಡಿಸಿದುದೂ ತಮ್ಮನ್ನೆಲ್ಲಾ ಮರುಭೂಮಿಯಿಂದ ತಂದು ನನ್ನೊಂದಿಗೆ ಸೇರಿಸಿದುದೂ ಅವನ ಮಹದುಪಕಾರವಾಗಿದೆ. ವಸ್ತುತಃ ಶೈತಾನನು ನನ್ನ ಮತ್ತು ನನ್ನ ಸಹೋದರರ ನಡುವೆ ಪಿತೂರಿಯನ್ನುಂಟು ಮಾಡಿಬಿಟ್ಟಿದ್ದನು. ವಾಸ್ತವದಲ್ಲಿ ನನ್ನ ಪ್ರಭು ಗ್ರಹಿಸಲಾಗದಂತಹ ಯುಕ್ತಿಗಳಿಂದ ತನ್ನ ವಿಧಿಯನ್ನು ಪೂರ್ತೀಕರಿಸುತ್ತಾನೆ. ನಿಶ್ಚಯವಾಗಿಯೂ ಅವನು ಸರ್ವಜ್ಞನೂ ಧೀಮಂತನೂ ಆಗಿರುತ್ತಾನೆ.

السِّجْنِ وَجَآءَ بِكُمْ مِّنَ الْبَدْوِ مِنْۢ بَعْدِ اَنْ نَّزَغَ الشَّيْطٰنُ بَيْنِىْ وَبَيْنَ اِخْوَتِىْ ؕ اِنَّ رَبِّىْ لَطِيْفٌ لِّمَا يَشَآءُ ؕ اِنَّهٗ هُوَ الْعَلِيْمُ الْحَكِيْمُ ۝١٠٠

101. ಓ ನನ್ನ ಪ್ರಭೂ, ನೀನು ನನಗೆ ಸಾಮ್ರಾಜ್ಯಾಧಿಕಾರವನ್ನು ದಯಪಾಲಿಸಿದೆ. ವಿಷಯಗಳ ಆಳವನ್ನರಿಯಲು ಕಲಿಸಿಕೊಟ್ಟೆ. ಓ ಆಕಾಶಗಳ ಮತ್ತು ಭೂಮಿಯ ನಿರ್ಮಾಪಕಾ! ಇಹದಲ್ಲೂ ಪರದಲ್ಲೂ ನೀನೇ ನನ್ನ ರಕ್ಷಕ ಮಿತ್ರನು. ನನ್ನನ್ನು ಮುಸ್ಲಿಮನನ್ನಾಗಿ ಅಂತ್ಯಗೊಳಿಸು ಮತ್ತು ಅಂತಿಮವಾಗಿ ಸಜ್ಜನರೊಂದಿಗೆ ಸೇರಿಸು.

رَبِّ قَدْ اٰتَيْتَنِىْ مِنَ الْمُلْكِ وَعَلَّمْتَنِىْ مِنْ تَاْوِيْلِ الْاَحَادِيْثِ ۚ فَاطِرَ السَّمٰوٰتِ وَالْاَرْضِ ۟ اَنْتَ وَلِىّٖ فِى الدُّنْيَا وَالْاٰخِرَةِ ۚ تَوَفَّنِىْ مُسْلِمًا وَّاَلْحِقْنِىْ بِالصّٰلِحِيْنَ ۝١٠١

102. ಓ ಪೈಗಂಬರರೇ, ನಿಮ್ಮ ಮೇಲೆ ಅವತೀರ್ಣಗೊಳಿಸುತ್ತಿರುವ ಈ ಚರಿತ್ರೆಯು ಅದೃಶ್ಯ ವೃತ್ತಾಂತಗಳಲ್ಲಾಗಿದೆ. ಅನ್ಯಥಾ ಯೂಸುಫರ ಸಹೋದರರು ಪರಸ್ಪರ ಒಮ್ಮತದೊಂದಿಗೆ ಕುತಂತ್ರ ಹೂಡಿದಾಗ ನೀವು ಅಲ್ಲಿರಲಿಲ್ಲ.

ذٰلِكَ مِنْ اَنْۢبَآءِ الْغَيْبِ نُوْحِيْهِ اِلَيْكَ ۚ وَمَا كُنْتَ لَدَيْهِمْ اِذْ اَجْمَعُوْۤا اَمْرَهُمْ وَهُمْ يَمْكُرُوْنَ ۝١٠٢

103. ಆದರೆ ನೀವು ಎಷ್ಟೇ ಆಗ್ರಹಿಸಿದರೂ ಇವರಲ್ಲಿ ಹೆಚ್ಚಿನವರು ವಿಶ್ವಾಸ ಹೊಂದುವವರಲ್ಲ.

وَمَاۤ اَكْثَرُ النَّاسِ وَلَوْ حَرَصْتَ بِمُؤْمِنِيْنَ ۝١٠٣

104. ವಸ್ತುತಃ ನೀವು ಅವರಿಂದ ಈ ಸೇವೆಗೆ ಯಾವ ಪ್ರತಿಫಲವನ್ನೂ ಬೇಡುವುದಿಲ್ಲ. ಇದು ಜಗತ್ತಿನವರಿಗೊಂದು ಸಾರ್ವತ್ರಿಕ ಉಪದೇಶ.

وَمَا تَسْـَٔلُهُمْ عَلَيْهِ مِنْ اَجْرٍ ؕ اِنْ هُوَ اِلَّا ذِكْرٌ لِّلْعٰلَمِيْنَ ۝١٠٤ ع ۱۱

105. ಆಕಾಶಗಳಲ್ಲೂ ಭೂಮಿಯಲ್ಲೂ ಎಷ್ಟೋ ನಿದರ್ಶನಗಳಿವೆ. ಅವುಗಳನ್ನು ಇವರು ಹಾದು ಕೊಂಡು ಹೋಗುತ್ತಿರುತ್ತಾರೆ ಮತ್ತು ಅವುಗಳ ಕಡೆಗೆ ಕಿಂಚಿತ್ ಗಮನ ಹರಿಸುವುದಿಲ್ಲ.

وَكَاَيِّنْ مِّنْ اٰيَةٍ فِى السَّمٰوٰتِ وَالْاَرْضِ يَمُرُّوْنَ عَلَيْهَا وَهُمْ عَنْهَا مُعْرِضُوْنَ ۝١٠٥

106. ಇವರಲ್ಲಿ ಹೆಚ್ಚಿನವರು ಅಲ್ಲಾಹನನ್ನು ನಂಬುತ್ತಾರೆ. ಆದರೆ ಅವನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿಸಿಕೊಂಡು (ನಂಬುತ್ತಾರೆ).

وَمَا يُؤْمِنُ اَكْثَرُهُمْ بِاللّٰهِ اِلَّا وَهُمْ مُّشْرِكُوْنَ ۝١٠٦

107. ಅಲ್ಲಾಹನ ಯಾತನೆಯ ಒಂದಂಶ ವಿಪತ್ತು ಥಟ್ಟನೆ ಇವರ ಮೇಲೆ ಬಿದ್ದುಬಿಡಲಾರದೆಂದು ಅಥವಾ ಲೋಕಾಂತ್ಯವಾಗುವ ಆ ಘಳಿಗೆಯು ಹಠಾತ್ತನೆ ಅವರ ಮೇಲೆ ಬಂದು ಬಿಡ ಲಾರದೆಂದು ಇವರೇನು ನಿಶ್ಚಿಂತರಾಗಿರುವರೇ?

أَفَأَمِنُوٓا أَن تَأْتِيَهُمْ غَاشِيَةٌ مِّنْ عَذَابِ ٱللَّهِ
أَوْ تَأْتِيَهُمُ ٱلسَّاعَةُ بَغْتَةً وَهُمْ لَا يَشْعُرُونَ ١٠٧

108. ನೀವು ಇವರೊಡನೆ ಸ್ಪಷ್ಟವಾಗಿ ಹೇಳಿಬಿಡಿರಿ - "ಇದೇ ನನ್ನ ಮಾರ್ಗ. ನಾನು ಅಲ್ಲಾಹನ ಕಡೆಗೆ ಕರೆ ನೀಡುತ್ತೇನೆ. ನಾನೂ ನನ್ನ ಸಂಗಾತಿಗಳೂ ಸಂಪೂರ್ಣ ಪ್ರಕಾಶದಲ್ಲಿ ದಾರಿಗಾಣುತ್ತಿದ್ದೇವೆ. ಅಲ್ಲಾಹನು ಅತ್ಯಂತ ಪಾವನನು. ಸಹಭಾಗಿಗಳಾಗಿಸುವವರೊಂದಿಗೆ ನನಗೆ ಯಾವ ಸಂಬಂಧವೂ ಇಲ್ಲ."

قُلْ هَٰذِهِۦ سَبِيلِىٓ أَدْعُوٓا إِلَى ٱللَّهِ ۚ عَلَىٰ بَصِيرَةٍ
أَنَا۠ وَمَنِ ٱتَّبَعَنِى ۖ وَسُبْحَٰنَ ٱللَّهِ وَمَآ أَنَا۠
مِنَ ٱلْمُشْرِكِينَ ١٠٨

109. ಓ ಪೈಗಂಬರರೇ, ನಿಮಗಿಂತ ಮುಂಚೆ ನಾವು ಕಳುಹಿಸಿದ್ದ ಪ್ರವಾದಿಗಳೆಲ್ಲರೂ ಪುರುಷರೇ ಆಗಿದ್ದರು. ಆಯಾ ನಾಡುಗಳಲ್ಲೇ ವಾಸಿಸುವವರಲ್ಲಾಗಿದ್ದರು ಮತ್ತು ಅವರ ಕಡೆಗೇ ನಾವು 'ದಿವ್ಯವಾಣಿ'ಯನ್ನು ಕಳುಹಿಸುತ್ತಲಿದ್ದೆವು. ಇವರಿಗಿಂತ ಮುಂಚಿನ ಜನಾಂಗಗಳ ಪರಿಣಾಮವು ಇವರಿಗೆ ಕಾಣದಿರಬೇಕಾದರೆ ಇವರು ಭೂಮಿಯ ಮೇಲೆ ಸಂಚರಿಸಲಿಲ್ಲವೇ? (ಪ್ರವಾದಿಗಳ ಬೋಧನೆ ಯನ್ನು ಸ್ವೀಕರಿಸಿ) ದೇವಭಯವಿರಿಸಿಕೊಂಡವರಿಗೆ ನಿಶ್ಚಯ ವಾಗಿಯೂ ಪರಲೋಕ ಗೇಹವು ಇನ್ನಷ್ಟು ಉತ್ತಮ. ಇನ್ನಾದರೂ ನೀವು ವಿವೇಚಿಸಲಾರಿರಾ?

وَمَآ أَرْسَلْنَا مِن قَبْلِكَ إِلَّا رِجَالًا نُّوحِىٓ
إِلَيْهِم مِّنْ أَهْلِ ٱلْقُرَىٰٓ ۗ أَفَلَمْ يَسِيرُوا فِى
ٱلْأَرْضِ فَيَنظُرُوا كَيْفَ كَانَ عَٰقِبَةُ ٱلَّذِينَ
مِن قَبْلِهِمْ ۗ وَلَدَارُ ٱلْءَاخِرَةِ خَيْرٌ لِّلَّذِينَ
ٱتَّقَوْا ۗ أَفَلَا تَعْقِلُونَ ١٠٩

110. (ಗತ ಪ್ರವಾದಿಗಳೂ ದೀರ್ಘಕಾಲದ ವರೆಗೆ ಬೋಧನೆ ನೀಡುತ್ತಲೇ ಇದ್ದರೂ ಜನರು ಕಿವಿ ಕೊಡಲಿಲ್ಲ) ಕೊನೆಗೆ ಪ್ರವಾದಿಗಳು ಜನರ ಬಗ್ಗೆ ನಿರಾಶೆಗೊಂಡಾಗ ಹಾಗೂ ಅವರೊಡನೆ ಸುಳ್ಳೇ ಹೇಳಲಾಗಿತ್ತೆಂದು ಜನರೂ ತಿಳಿದುಕೊಂಡಾಗ ಹಠಾತ್ತನೆ ನಮ್ಮ ಸಹಾಯವು ಪ್ರವಾದಿಗಳಿಗೆ ತಲಪಿತು. ಇಂತಹ ಸಂದರ್ಭ ಬಂದು ಬಿಟ್ಟಾಗ ನಮಗಿಷ್ಟ ಬಂದವರನ್ನು ರಕ್ಷಿಸಿಕೊಳ್ಳುವುದು ನಮ್ಮ ರೂಢಿ. ಅಪರಾಧಿಗಳ ಮೇಲಿಂದ ನಮ್ಮ ಯಾತನೆಯು ಎಷ್ಟಕ್ಕೂ ಸರಿಯಲಾರದು.

حَتَّىٰٓ إِذَا ٱسْتَيْـَٔسَ ٱلرُّسُلُ وَظَنُّوٓا أَنَّهُمْ
قَدْ كُذِبُوا جَآءَهُمْ نَصْرُنَا فَنُجِّىَ مَن
نَّشَآءُ ۖ وَلَا يُرَدُّ بَأْسُنَا عَنِ ٱلْقَوْمِ ٱلْمُجْرِمِينَ ١١٠

111. ಗತ ಸಮುದಾಯಗಳ ಈ ಕಥೆಗಳಲ್ಲಿ ಬುದ್ಧಿಜೀವಿಗಳಿಗೆ ಪಾಠವಿದೆ. ಕುರ್‌ಆನಿನಲ್ಲಿ ವಿವರಿಸಲ್ಪಡುತ್ತಿರುವುದೆಲ್ಲ ಕೃತಕ ವಿಷಯ ಗಳಲ್ಲ. ಪರಂತು ಇದಕ್ಕಿಂತ ಮುಂಚೆ ಬಂದಿರುವ ಗ್ರಂಥಗಳ ದೃಢೀಕರಣವೂ ಪ್ರತಿಯೊಂದು ವಿಷಯದ ವಿವರಣೆಯೂ[25] ಸತ್ಯವಿಶ್ವಾಸವನ್ನು ಸ್ವೀಕರಿಸಿಕೊಳ್ಳುವವರಿಗೆ ಸನ್ಮಾರ್ಗದರ್ಶನವೂ ಅನುಗ್ರಹವೂ ಆಗಿರುತ್ತದೆ.

لَقَدْ كَانَ فِي قَصَصِهِمْ عِبْرَةٌ لِّأُولِي الْأَلْبَابِ
مَا كَانَ حَدِيثًا يُفْتَرَىٰ وَلَٰكِن تَصْدِيقَ
الَّذِي بَيْنَ يَدَيْهِ وَتَفْصِيلَ كُلِّ
شَيْءٍ وَهُدًى وَرَحْمَةً لِّقَوْمٍ يُؤْمِنُونَ ١١١

---

25. ಅರ್ಥಾತ್- ಮನುಷ್ಯನ ಮಾರ್ಗದರ್ಶನಕ್ಕೆ ಅಗತ್ಯವಿರುವ ಎಲ್ಲಾ ವಿಷಯಗಳ ವಿವರಣೆ, ಕೆಲವರು "ಎಲ್ಲಾ ವಿಷಯಗಳ ವಿವರಣೆ" ಎಂದರೆ ಅನಗತ್ಯವಾಗಿ ಲೋಕದ ಸರ್ವಸ್ವದ ವಿವರಣೆ ಎಂದು ಭಾವಿಸುತ್ತಾರೆ. ಅನಂತರ ಅವರು ಕುರ್‌ಆನಿನಲ್ಲಿ ಕಾಡು, ವೈದ್ಯಕೀಯಶಾಸ್ತ್ರ, ಗಣಿತ ಮತ್ತಿತರ ಜ್ಞಾನ ಮತ್ತು ಕಲೆಗಳ ವಿವರಗಳು ಲಭ್ಯವಿಲ್ಲವಲ್ಲ ಎಂಬ ಗೊಂದಲಕ್ಕೆ ಈಡಾಗುತ್ತಾರೆ. ಇನ್ನು ಕೆಲವರು ಎಲ್ಲಾ ಕಲೆಗಳ ವಿವರಗಳನ್ನು ಕುರ್‌ಆನ್‌ನಿಂದ ಪಡೆಯಲು ಹೇಗಾದರೂ ಮಾಡಿ ಪ್ರಯತ್ನಿಸುತ್ತಾರೆ.